ಬೆಂಗಳೂರು, ಕೋಲಾರ, ಹಾಸನ, ಚಿತ್ರದುರ್ಗ, ದಾವಣಗೆರೆ, ವಿಜಯನಗರ, ಬಳ್ಳಾರಿ, ರಾಯಚೂರು, ವಿಜಯಪುರ, ಕಲಬುರಗಿ,

ದಶಕದ ನಡಿಗೆ

# ಸಹಾಯ ವಾಣಿ

RNI No.: KARKAN/2014/54928

ನೊಂದವರ ಧ್ವನಿ

SAHAYAVANI KANNADA DAILY

ವೆಬ್‌ಸೈಟ್:– www.sahayavani.com

Postel Registration No.:KA/BGW-1862/2024-26, Patrika channel, RMS Bhavan, Bengaluru, PSO, Mysore Road, Bengaluru-560026

SAHAYAVANI DAILY PAPER

ಕನ್ನಡ ದಿನಪತ್ರಿಕೆ

EDITOR : S.K.WADEYAR

ಸಂಪುಟ : 14, Vol : 14, ಸಂಚಿಕೆ : 67, Issue : 67, ದಿನಾಂಕ : 22-04-2026, Date : 22-04-2026, ಬುಧವಾರ, Wednesday, ಪುಟ : 4, Page : 4, Rs. 3–00

ಸಂಪಾದಕರು : ಎಸ್.ಕೆ.ಒಡೆಯರ್, ಉಪ ಸಂಪಾದಕರು : ಸುಚಿತ್ರ ಎಸ್.ಒಡೆಯರ್, ಗೌರವ ಸಂಪಾದಕರು : ಗುರುರಾಜ ಎಂ., ಫೋ: 080 31212322, ಮೊ : 9902543494, Email : sahayavanay@gmail.com

## ಇಂದಿನಿಂದ ಸಿಇಟಿ ಪರೀಕ್ಷೆ : 3.30 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳ ನೋಂದಣಿ

ಸಹಾಯವಾಣಿ ಸುದ್ದಿ

ಬೆಂಗಳೂರು: ಇಂದಿನಿಂದ ಆರಂಭಗೊಳ್ಳಲಿರುವ ಸಿಇಟಿ ಪರೀಕ್ಷೆಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಸಕಲ ಸಿದ್ಧತೆ ಮಾಡಿಕೊಂಡಿದೆ. ದಾಖಲೆ ಪ್ರಮಾಣದಲ್ಲಿ ದ್ವಿತೀಯ ಪಿಯುಸಿ ಪರೀಕ್ಷೆ ಫಲಿತಾಂಶ ಬಂದಿರುವುದರಿಂದ ಸಿಇಟಿ ಪರೀಕ್ಷೆಗೆ ಈಗಾಗಲೇ 3. 30 ಲಕ್ಷ ಕ್ಕೂ ಹೆಚ್ಚು ವಿದ್ಯಾರ್ಥಿಗಳು ನೋಂದಣಿ ಮಾಡಿಕೊಂಡಿದ್ದು, ರಾಜ್ಯದ 745 ಕೇಂದ್ರಗಳಲ್ಲಿ ಪರೀಕ್ಷೆ ನಡೆಯಲಿದೆ. ಪ್ರಸ್ತುತ ಏ.22, 23 ಮತ್ತು 24 ರಂದು ಪರೀಕ್ಷೆ ನಡೆಯುತ್ತಿದ್ದು, ಕೆಇಎ ಯಾವುದೇ ಲೋಪವಿಲ್ಲದೇ ಮತ್ತು ಪಾರದರ್ಶಕವಾಗಿ ಪರೀಕ್ಷೆ ನಡೆಸಲು ಸಕಲ ತಯಾರಿ ನಡೆಸಿದೆ.

ಪರೀಕ್ಷೆ ಬರೆಯುವ ವಿದ್ಯಾರ್ಥಿಗಳಿಗೆ ವಸ್ತ್ರಸಂಹಿತೆಯನ್ನು ಕೂಡ ಕಡ್ಡಾಯಗೊಳಿಸಲಾಗಿದೆ. ಎಲ್ಲಾ ಪರೀಕ್ಷಾ ಕೇಂದ್ರಗಳಲ್ಲಿ ಸಿಸಿ ಕ್ಯಾಮೆರಾಗಳನ್ನು ಅಳವಡಿಸಲಾಗಿದ್ದು, ಪರೀಕ್ಷಾ ಬರೆಯುವ ವಿದ್ಯಾರ್ಥಿಗಳಿಗೆ ಸ್ಕ್ಯಾನಿಂಗ್ ವ್ಯವಸ್ಥೆ ಮೂಲಕ ಗುರುತು ಖಾತ–ರಿಪಡಿಸಿಕೊಳ್ಳಲಾಗುತ್ತಿದೆ.ವೃತ್ತಿ ಶಿಕ್ಷಣದ ಆಯ್ಕೆಗಾಗಿ ನಡೆಯುವ ಈ ಪ್ರಮುಖ ಸಿಇಟಿ ಪರೀಕ್ಷೆಯಲ್ಲಿ ಇಂಜಿನಿಯರಿಂಗ್, ದಂತ ವೈದ್ಯಕೀಯ, ಹಾಗೂ ಫಾರ್ಮಸಿ ಸೇರಿದಂತೆ ವಿವಿಧ ಕೋರ್ಸುಗಳಿಗೆ ಪ್ರವೇಶ ಪಡೆಯಲು ಅವಕಾಶ ಸಿಗಲಿದೆ.

ಪರೀಕ್ಷೆ ಸಂದರ್ಭದಲ್ಲಿ ವಿದ್ಯಾರ್ಥಿಗಳು ಪೂರ್ಣ ತೋಳಿ ಶರ್ಟುಗಳನ್ನು ಬಳಸುವಂತಿಲ್ಲ, ಸಾಧ್ಯವಾದಷ್ಟು ಟಿ–ಶರ್ಟ್ ಕಾಲರ್ ರಹಿತ ಶರ್ಟ್‌ಗಳನ್ನು ಧರಿಸಬೇಕು.ಕುರ್ತಾ ಫೈಜಾಮ, ಜೀನ್ ಪ್ಯಾಂಟ್‌ನಲ್ಲಿ ಬಂದರೆ ವಿದ್ಯಾರ್ಥಿಗಳಿಗೆ ಪ್ರವೇಶ ನೀಡುವುದಿಲ್ಲವೆಂದು ಎಚ್ಚರಿಕೆ ನೀಡಲಾಗಿದೆ.

ಪುಟ–2

## ಸರ್ಕಾರಕ್ಕೆ ಹೈಕೋರ್ಟ್ ತರಾಟೆ

# ಹಿಂದಿಗೆ ಅಂಕ ಕೊಡಿ



**ಅಕ್ಟೋಬರ್ ನಲ್ಲೇ ಸುತ್ತೋಲೆ**

ಎಸ್‌ಎಸ್‌ಎಲ್‌ಸಿ ಪರೀಕ್ಷೆ ನಡೆಸುವ ಸಂಬಂಧ 2025ರ ಅಕ್ಟೋಬರ್ 28 ರಂದು ಸುತ್ತೋಲೆ ಹೊರಡಿಸಲಾಗಿದೆ. ಬಳಿಕ 2026ರ ಮಾರ್ಚ್ 18– ಏಪ್ರಿಲ್ 2 ರವರೆಗೆ ಪರೀಕ್ಷೆ ನಡೆದಿದೆ. ದಿನಪತ್ರಿಕೆ ವರದಿ ಆಧಾರದ ಮೇಲೆ ಅರ್ಜಿ ವಜಾ ಆಗಿದೆ ಎಂದು ಅಡ್ವೊಕೇಟ್ ಜನರಲ್ ಶಶಿಕಿರಣ್ ಶೆಟ್ಟಿ ವಾದ ಮಂಡಿಸಿದರು.

ಸಹಾಯವಾಣಿ ಸುದ್ದಿ

ಬೆಂಗಳೂರು: ಹಿಂದಿ ಸೇರಿದಂತೆ ಎಸ್–ಎಸ್‌ಎಲ್‌ಸಿ ಪರೀಕ್ಷೆಯ ತೃತೀಯ ಭಾಷೆಗೆ ಪ್ರಸಕ್ತ ವರ್ಷದಲ್ಲಿ ಗ್ರೇಡ್ ಬೇಡ, ಅಂಕವನ್ನೇ ನೀಡಿ ಎಂದು ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ಆದೇಶಿಸಿದೆ.

ತೃತೀಯ ಭಾಷೆಗೆ ಅಂಕದ ಬದಲು ಗ್ರೇಡ್ ನೀಡುವ ಸಂಬಂಧ ಅರ್ಜಿ ವಿಚಾರಣೆ ನಡೆಸಿದ ಹೈಕೋರ್ಟ್, ಈ ವರ್ಷ ಹಳೆ ಪದ್ಧತಿಯನ್ನೇ ಮುಂದುವರಿಸಲು ರಾಜ್ಯ ಸರ್ಕಾರಕ್ಕೆ ಸೂಚನೆ ನೀಡಿದೆ.

ಎಸ್ಸೆಸ್ಸೆಲ್ಸಿ ಪರೀಕ್ಷೆಯ ಹಿಂದಿ ವಿಷಯಕ್ಕೆ ಅಂಕ ನೀಡುವಂತೆ ಸೂಚನೆ ಹಿನ್ನೆಲೆಯಲ್ಲಿ ಆದೇಶ ನೀಡಿ ಮರುಪರಿಶೀಲನೆ ಕೋರಿದ್ದ ರಾಜ್ಯ ಸರ್ಕಾರದ ಅರ್ಜಿಯನ್ನು ಇತ್ಯರ್ಥಗೊಳಿಸಿದೆ. ಈ ಪ್ರಕರಣಕ್ಕೆ ಸಂಬಂಧಿಸಿದ ಮರು ಪರಿಶೀಲನಾ ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿದೆ.

ಪ್ರಸಕ್ತ ಸಾಲಿಗೆ ಹಿಂದಿ ಭಾಷೆಗೆ ಗ್ರೇಡ್ ಬದಲು ಅಂಕ ನೀಡುವಂತೆ ನ್ಯಾ.ಇ.ಎಸ್.ಇಂದಿರೇಶ್ ಅವರಿದ್ದ ಹೈಕೋರ್ಟ್ ಪೀಠ ಆದೇಶ ಮಾಡಿದೆ.

ಸರ್ಕಾರದ ಪರ ಅಡ್ವೊಕೇಟ್ ಜನರಲ್ ಶಶಿಕಿರಣ್ ಶೆಟ್ಟಿ ವಾದ ಮಂಡಿಸಿ ಹಿಂದಿ ಭಾಷೆಯಲ್ಲಿ ಲಕ್ಷಕ್ಕೂ ಹೆಚ್ಚು ಮಂದಿ ಅನುತ್ತೀರ್ಣಗೊಂಡಿದ್ದರು. ಹೀಗಾಗಿ ವಿದ್ಯಾರ್ಥಿಗಳ ಮೇಲೆ ಒತ್ತಡ ಕಡಿಮೆ ಮಾಡಲು ಸೂಕ್ತ ತಿದ್ದುಪಡಿಯೊಂದಿಗೆ ನಿಯಮ ರಚಿಸಲು ಸರ್ಕಾರ ಕರಡು ರೂಪಿಸುತ್ತಿದೆ. ಅಂಕದ ಬದಲು ಗ್ರೇಡ್ ನೀಡಲಾಗುತ್ತಿದೆ ಎಂದು ವಾದಿಸಿದ್ದರು.

ಆದರೆ ನ್ಯಾ.ಇ.ಎಸ್.ಇಂದಿರೇಶ್ ಅವರಿದ್ದ ಹೈಕೋರ್ಟ್ ಪೀಠ ಸರ್ಕಾರವನ್ನೇ

ಪುಟ–2

## ಬಂಗಾಳಿ ನಿವಾಸಿಗಳಿಗೆ ದೊರೆಯದ ಬಿಪಿಎಲ್, ಭೂ ದಾಖಲೆ, ಮತದಾರ ಕಾರ್ಡ್

### ಬಂಗಾಳಿ ವಲಸೆ ಸಮುದಾಯದ ಸಮಸ್ಯೆ ಪರಿಹಾರಕ್ಕೆ ಆಗ್ರಹಿಸಿ ಮನವಿ



ಸಹಾಯವಾಣಿ ಸುದ್ದಿ

ರಾಯಚೂರು: ರಾಯಚೂರು ಜಿಲ್ಲೆಯ ಸಿಂಧನೂರು ಭಾಗದಲ್ಲಿ ವಾಸಿಸುತ್ತಿರುವ ವಲಸೆ ಬಂಗಾಳಿ ಸಮುದಾಯದ ಜನರು ಕಳೆದ ಏಳು ದಶಕಗಳಿಂದ ಎದುರಿಸುತ್ತಿರುವ ಮಾನವೀಯ ಹಾಗೂ ಆಡಳಿತಾತ್ಮಕ ಸಮಸ್ಯೆಗಳನ್ನು ಪರಿಹ–ರಿಸುವಂತೆ ಆಗ್ರಹಿಸಿ ಅಜಾದ್ ಬಂಗ್ ಆರ್ಮಿ ಸಂಘಟನೆಯಿಂದ ಜಿಲ್ಲಾಡಳಿತ ಭವನದ ಎದುರು ಪ್ರತಿಭಟನೆ ನಡೆಸಿ ಜಿಲ್ಲಾಧಿಕಾರಿ ಕಚೇರಿಯ ಸ್ಥಾನಿಕ ಅಧಿಕಾರಿಗೆ ಮನವಿ ಸಲ್ಲಿಸಲಾಯಿತು.

ಇದೇ ವೇಳೆ ಸಂಘಟನೆಯ ಪ್ರಮುಖರು ಮಾತನಾಡಿ, 1947ರ ವಿಭಜನೆ ಹಾಗೂ 1964 ಮತ್ತು 1971ರ ಸಂದರ್ಭಗಳಲ್ಲಿ ಪೂರ್ವ ಬಂಗಾಳದಿಂದ ಸ್ಥಳಾಂತರಗೊಂಡ ಹಿಂದೂ ಕುಟುಂಬಗಳನ್ನು ಭಾರತ ಸರ್ಕಾರದ ಪುನರ್ವಸತಿ

ಯೋಜನೆಯಡಿ ಸಿಂಧನೂರು ಭಾಗದಲ್ಲಿ ನೆಲೆಗೊಳಿಸಲಾಗಿ ತ್ತು. ಆದರೆ ಆ ಕುಟುಂಬಗಳ ಮೂರನೇ ತಲೆಮಾರಿನವರೂ ಇಂದಿಗೂ ಮೂಲಭೂತ ಹಕ್ಕುಗಳಿಂದ ವಂಚಿತರಾಗಿದ್ದಾರೆ ಎಂದು ದೂರಿದರು.

ಭೂ ಸಂಬಂಧಿತ ಸಮಸ್ಯೆಗಳು ಗಂಭೀರವಾಗಿದ್ದು, ಹಲವು ಕುಟುಂಬಗಳಿಗೆ ಇನ್ನೂ ಮಾಲೀಕತ್ವದ ದಾಖಲೆಗಳು ಲಭ್ಯವಾಗಿಲ್ಲ. ಭೂಮಿ ಹಸ್ತಾಂತರ ಪ್ರಕ್ರಿಯೆ ಪೂರ್ಣಗೊಂಡಿಲ್ಲದೆ, ಬಹುತೇಕ ಜನರು ಕೇವಲ ಕಬಳಿಕೆಯ ಹಕ್ಕು ಹೊಂದಿದ್ದಾರೆ.

ಭೂಮಿ ಡಿಜಿಟಲೀಕರಣದ ವೇಳೆ ಅನೇಕರ ಹೆಸರುಗಳು ದಾಖಲೆಗಳಿಂದ ಅಳಿದು ಹೋಗಿದ್ದು, ಕೆಲವು ಜಾಗಗಳನ್ನು ಸರ್ಕಾರದ ಅಥವಾ ಬೇನಾಮಿ ಎಂದು ದಾಖಲಿಸಲಾಗಿದೆ ಎಂದು ಆರೋಪಿಸಿದರು.

ಇದರಿಂದಾಗಿ ರೈತರಿಗೆ ಕೃಷಿ ಸಾಲಗಳು ಅಥವಾ ಕಿಸಾನ್ ಕ್ರೆಡಿಟ್ ಕಾರ್ಡ್

ಪುಟ–2

## ಅರವಿಂದ ಕೇಜ್ರಿವಾಲ್ ಅರ್ಜಿ ವಜಾ

ಸಹಾಯವಾಣಿ ಸುದ್ದಿ

ನವದೆಹಲಿ: ರಾಷ್ಟ್ರ ರಾಜಧಾನಿ ಅಬಕಾರಿ ನೀತಿ ಅನುಷ್ಠಾನ ಪ್ರಕರಣ ಸಂಬಂಧ ದೆಹಲಿ ಹೈಕೋರ್ಟ್ ನ್ಯಾಯಾಧೀಶೆ ಸ್ವರ್ಣ ಕಾಂತ ಶರ್ಮಾ ಅವರನ್ನು ವಿಚಾರಣೆಯಿಂದ ಹಿಂದೆ ಸರಿಯುವಂತೆ ಕೋರಿ ಎಎಪಿ ಸಂಚಾಲಕ ಅರವಿಂದ್ ಕೇಜ್ರಿವಾಲ್ ಸಲ್ಲಿಸಿದ್ದ ಅರ್ಜಿಯನ್ನು ದೆಹಲಿ ಹೈಕೋರ್ಟ್ ವಜಾ ಮಾಡಿದೆ.

ಅರವಿಂದ್ ಕೇಜ್ರಿವಾಲ್ ಅವರು ಎತ್ತಿರುವ ಹಕ್ಕುಗಳು ಸಾಕ್ಷ್ಯಗಳಿಂದ ಬೆಂಬಲಿತವಾಗಿಲ್ಲ ಮತ್ತು ಅವರ ವಿಶ್ವಾಸಾರ್ಹತೆಯನ್ನು ಪ್ರಶ್ನಿಸುವ ಆರೋಪ ಮಾತ್ರ ಆಧರಿಸಿವೆ ಎಂದು ಹೇಳಿದ ಹೈಕೋರ್ಟ್ ಅರ್ಜಿಯನ್ನು ತಿರಸ್ಕರಿಸಿದೆ.

ಪ್ರಕರಣದಿಂದ ಹಿಂದೆ ಸರಿಯುವುದು ಆರೋಪಗಳಿಗೆ ಅರ್ಹತೆ ಇದೆ ಎಂದು ಸೂಚಿಸುತ್ತದೆ ಮತ್ತು ಪ್ರಕರಣವನ್ನು ಮುಂದುವ–ರಿಸುವುದು ಟೀಕೆಗೆ ಕಾರಣವಾಗಬಹುದು ಎಂದು ನ್ಯಾಯಾಲಯ ಹೇಳಿದೆ.

ಪಕ್ಷಪಾತದ ಆರೋಪಗಳನ್ನು ಕೇವಲ ಅನುಮಾನಗಳಲ್ಲದೆ, ಘನ ಪುರಾವೆಗಳಿಂದ ಬೆಂಬಲಿಸಬೇಕು ಎಂದು ನ್ಯಾಯಾಲಯ ಸ್ಪಷ್ಟಪಡಿಸಿದೆ. “ಒಬ್ಬ ದಾವೆದಾರನ ಸಾಮಾನ್ಯ ಅಸಮಾಧಾನ ಅಥವಾ ಈ ನ್ಯಾಯಾಲಯ ಆತನಿಗೆ ಪರಿಹಾರ ನೀಡದಿರಬಹುದು ಎಂದು ತಿಳಿಸಿದೆ.

ನಿರ್ಧಾರ, ಗ್ರಹಿಕೆಗಳು ಅಥವಾ ಊಹೆಗಳಿಂದ ಪ್ರಭಾವಿತವಾಗಲು ಸಾಧ್ಯವಿಲ್ಲ ಮತ್ತು ಕಾನೂನು ಮತ್ತು ಸತ್ಯಗಳನ್ನು ಕಟ್ಟುನಿಟ್ಟಾಗಿ ಆಧರಿಸಿರಬೇಕು ಎಂದು ನ್ಯಾಯಪೀಠ ಹೇಳಿದೆ.

ಅರ್ಜಿಯಲ್ಲಿ ಎತ್ತಲಾದ ಪ್ರಮುಖ ವಿಷಯವೆಂದರೆ ನ್ಯಾಯಾಧೀಶರ ಮಕ್ಕಳ ವೃತ್ತಿಪರ ಪಾತ್ರಗಳಿಗೆ ಸಂಬಂಧಿಸಿದೆ. ದೃಢವಾಗಿ ಪ್ರತಿಕ್ರಿಯಿಸಿದ ನ್ಯಾಯಾಲಯ, ಅವರ ಕುಟುಂಬ ಸದಸ್ಯರು ಮತ್ತು ಪ್ರಕರಣದ ನಡುವೆ ಯಾವುದೇ ಸಂಬಂಧವಿಲ್ಲ ಎಂದು ಹೇಳಿದೆ.

ಪುಟ–2

## ಡಾ.ರಾಜಕುಮಾರ್ ಜಯಂತಿ ಅರ್ಥಪೂರ್ಣ ಆಚರಣೆ: ಎಡಿಸಿ ಶಿವಾನಂದ

ಸಹಾಯವಾಣಿ ಸುದ್ದಿ

ರಾಯಚೂರು: ನಟ ಸಾರ್ವಭೌಮ, ವರನಟ ಡಾ.ರಾಜ್ ಕುಮಾರ್ ಅವರ ಜನ್ಮ ದಿನಾಚರಣೆ ಕಾರ್ಯಕ್ರಮವನ್ನು ಪ್ರತಿ ವರ್ಷದಂತೆ ಈ ವರ್ಷವು ಇದೇ ಏ.24 ರಂದು ಅರ್ಥಪೂರ್ಣವಾಗಿ ಆಚ–ರಿಸಲಾಗುತ್ತದೆ ಎಂದು ಅಪರ ಜಿಲ್ಲಾಧಿಕಾರಿ ಶಿವಾನಂದ ಅವರು ಹೇಳಿದರು.

ಏಪ್ರಿಲ್ 24ರ ಮಂಗಳವಾರ ದಂದು ನಗರದ ನೂತನ ಜಿಲ್ಲಾಧಿಕಾರಿಗಳ ಕಾರ್ಯಾಲಯದ ಅಪರ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಡಾ.ರಾಜಕುಮಾರ ಜಯಂತಿ ಅರ್ಥಪೂರ್ಣವಾಗಿ ಆಚರಿಸುವ ಕು–ರಿತು ಸಂಬಂಧಿಸಿದ ಇಲಾಖೆಯ ಅಧಿಕಾರಿಗಳಿಗೆ ನಿರ್ದೇಶನ ನೀಡಿ ಅವರು ಮಾತನಾಡಿದರು.

ಡಾ. ರಾಜಕುಮಾರ್ ಅಭಿಮಾನಿಗಳನ್ನು ಈ ಕಾರ್ಯಕ್ರಮಕ್ಕೆ ಆಹ್ವಾನಿಸಬೇಕು. ವಿಶೇಷ ಉಪನ್ಯಾಸಕರನ್ನು ಕರೆಸಿ ಡಾ. ರಾಜಕುಮಾರ ಅವರ ಜೀವನ ಹಾಗೂ ಸಾಧನೆಗಳ ಕುರಿತು ವಿಶೇಷ ಉಪನ್ಯಾಸ ನೀಡುವಂತಾಗಬೇಕು. ಪ್ರತಿ ವರ್ಷದಂತೆ ಈ ವರ್ಷ ರಾಯಚೂರು ನಗರದ ಕನ್ನಡ ಭವನದಲ್ಲಿ ಏಪ್ರಿಲ್ 24ರ ಬೆಳಿಗ್ಗೆ 11 ಗಂಟೆಗೆ ಕಾರ್ಯಕ್ರಮ ಅಚ್ಚುಕಟ್ಟಾಗಿ ಆಯೋಜನೆ ಮಾಡಬೇಕು ಎಂದರು.

ಅಂದು ಬೆಳಿಗ್ಗೆ ಡಾ. ರಾಜಕುಮಾರ ಅವರ



ಭಾವಚಿತ್ರಕ್ಕೆ ಪುಷ್ಪ ನಮನ, ಅವರ ಚಲನಚಿತ್ರ ಗೀತೆಗಳ ಗಾಯನ, ಡಾ. ರಾಜಕುಮಾರ ಕುರಿತು ಇತರೆ ಕಾರ್ಯಕ್ರಮಗಳನ್ನು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಹಾಗೂ ಕನ್ನಡ ಸಾಹಿತ್ಯ ಪರಿಷತ್ ರಾಯಚೂರು ಸೇರಿದಂತೆ ಇತರೆ ಡಾ.ರಾಜ–ಕುಮಾರ ಅಭಿಮಾನಿ ಬಳಗ, ಕಲಾ ತಂಡಗಳ ಸಹಯೋಗದೊಂದಿಗೆ ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ಆಯೋಜಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಇದೇ ಸಂದರ್ಭದಲ್ಲಿ ರಾಯಚೂರಿನ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕರಾದ ಸುರೇಶ ಜಿ, ವಾರ್ತಾ ಇಲಾಖೆಯ ಸಿಬ್ಬಂದಿಗಳಾದ ಎ.ಪ್ರಕಾಶ್, ರಮೇಶ ಗೌಡೂರು ಜಾಲಹಳ್ಳಿ ಸೇ–ರಿದಂತೆ ಇತರರು ಉಪಸ್ಥಿತರಿದ್ದರು.

## ಸಾರ್ವಜನಿಕ ಸ್ಥಳಗಳಲ್ಲಿ ಮಲ, ಮೂತ್ರ ವಿಸರ್ಜನೆ ನಿಷೇಧ: ಜುಬಿನ್ ಮೊಹೊಪಾತ್ರ

ಸಹಾಯವಾಣಿ ಸುದ್ದಿ



ರಾಯಚೂರು: ರಾಯಚೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಸಾರ್ವಜನಿಕ ಸ್ಥಳಗಳಲ್ಲಿ ಯಾವುದೇ ಕಾರಣಕ್ಕೂ ಮಲ, ಮೂತ್ರ ವಿಸರ್ಜನೆ ಮಾಡುವುದನ್ನು ನಿಷೇಧಿಸಲಾಗಿದೆ ಎಂದು ಪಾಲಿಕೆಯ ಆಯುಕ್ತರಾದ ಜುಬಿನ್ ಮೊಹೊಪಾತ್ರ ಅವರು ತಿಳಿಸಿದ್ದಾರೆ.

ಕೇಂದ್ರ ಹಾಗೂ ರಾಜ್ಯ ಸರ್ಕಾರದ ಪೌರಾಡಳಿತ ನಿರ್ದೇಶನಾಲಯ ಬೆಂಗಳೂರು ಇವರ ಪತ್ರದನ್ವಯ ಸ್ವಚ್ಛ ಭಾರತ್ ಮಿಷನ್ ಯೋಜನೆಗೆ ಸಂಬಂಧಿಸಿದಂತೆ ನೀಡಿರುವ ಮಾರ್ಗ ಸೂಚಿಗಳನ್ವಯ ರಾಯಚೂರು ಮಹಾನಗರ ಪಾಲಿಕೆ ವ್ಯಾಪ್ತಿಯ 35 ವಾರ್ಡಗಳನ್ನು ಓ.ಡಿ.ಎಫ್ (ಬಯಲು ಶೌಚ ಮುಕ್ತ) ನಗರವೆಂದು ಘೋಷಿಸಿ ಪ್ರಮಾಣ ಪತ್ರ ಪಡೆಯಲಾಗಿದೆ.

ಅದರಂತೆ ಓ.ಡಿ.ಎಫ್+ ಮರು ಪ್ರಮಾಣೀಕರಣ ಬಯಲು ಶೌಚ ಮುಕ್ತ ನಗರ ಎಂದು 35 ವಾರ್ಡಗಳನ್ನು ಘೋಷಿಸಲಾಗಿದೆ. ಪಾಲಿಕೆಯ ಸಾರ್ವಜನಿಕ ಸ್ಥಳ ಗಳಲ್ಲಿ ಯಾವುದೇ ಕಾರಣಕ್ಕೂ ಮಲ, ಮೂತ್ರ ವಿಸರ್ಜನೆ ಮಾಡಬಾರದು.

ಮಾಡಿದಲ್ಲಿ ಮೂತ್ರ ವಿಸರ್ಜನೆಗೆ 500ರೂ. ಮತ್ತು ಮಲ ವಿಸರ್ಜನೆಗೆ 1000 ರೂ. ದಂಡ ವಿಧಿಸಲಾಗುವುದು. ಸಾರ್ವಜನಿಕರು, ಸಾರ್ವಜನಿಕ ಶೌಚಾಲಯಗಳು, ಹೋಟೆಲ್ ಮತ್ತು ಪೆಟ್ರೋಲ್ ಬಂಕ್‌ಗಳ ಶೌಚಾಲಯಗಳನ್ನು ಉಚಿತವಾಗಿ ಬಳಸಬಹುದಾಗಿದೆ.

ಈ ಬಗ್ಗೆ ಸಾರ್ವಜನಿಕರಿಂದ ಸಲಹೆ, ಸೂಚನೆ ಹಾಗೂ ಆಕ್ಷೇಪಣೆಗಳನ್ನು ಪ್ರಕಟಣೆ ಪ್ರಚುರ ಪಡಿಸಿದ 07 ದಿವಸಗಳೊಗಾಗಿ ಸೂಕ್ತ ದಾಖಲೆಗಳೊಂದಿಗೆ ಲಿಖಿತವಾಗಿ ಸಲ್ಲಿಸಬಹುದಾಗಿದೆ ಎಂದು ರಾಯಚೂರು ಮಹಾನಗರ ಪಾಲಿಕೆಯ ಆಯು ಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಹೊಸೂರು ಗ್ರಾಮದ ಶ್ರೀ ಸಂಗಮೇಶ್ವರ ದೇವಸ್ಥಾನ ನೂತನ ಶಿಲಾ ಮೂರ್ತಿಗಳ ಭವ್ಯ ಮೆರವಣಿಗೆ

ಸಹಾಯವಾಣಿ ಸುದ್ದಿ

ರಾಯಚೂರು: ನಗರದ ಹೊಸೂರು ಬಡಾವಣೆಯ ಐತಿಹಾಸಿಕ ಶ್ರೀ ಸಂಗಮೇಶ್ವರ ದೇವಸ್ಥಾನ ನೂತನ ಶಿಲಾ ಮೂರ್ತಿಗಳ ಭವ್ಯ ಮೆರವಣಿಗೆ ಗ್ರಾಮದಲ್ಲಿ ಅದ್ದೂ–ರಿಯಾಗಿ ನೆರವೇರಿತು.

ಗ್ರಾಮದ ಸರ್ವ ಜಾತಿ, ಧರ್ಮವದರು ಸೇರಿ ಮುನ್ನೂರು ವರ್ಷಗಳ ಇತಿ–ಹಾಸವಿರುವ ಶ್ರೀ ಸಂಗಮೇಶ್ವರ ದೇವಸ್ಥಾನ ಜೀರ್ಣೋದ್ಧಾರ ಕೈಗೊಂಡಿದ್ದರಿಂದ ನೂತನ ಶಿಲಾ ಮೂರ್ತಿಗಳನ್ನು ಮೆರವಣಿಗೆ ಮೂಲಕ ಕರೆತಂದು ಪೂಜಿಸಲಾಯಿತು.

ಕಿಲ್ಲೆ ಬೃಹನ್ಮಠದ ಶ್ರೀ ಶಾಂತಮಲ್ಲ ಶಿವಾಚಾರ್ಯರ ದಿವ್ಯ ಸಾನಿಧ್ಯದಲ್ಲಿ ವಿಧಿವ್ಯಕ್ತವಾಗಿ ಪೂಜಾ ಕಾರ್ಯಗಳು ನಡೆದವು.

ಮಹಿಳೆಯರ ಪೂರ್ಣ ಕುಂಭಕಳಸಗಳು ಹಾಗೂ ವಿವಿಧ ವಾದ್ಯಗಳೊಂದಿಗೆ ಅದ್ದೂರಿಯ ಸ್ವಾಗತ ನೀಡಲಾಯಿತು. ಇಡಿ ಗ್ರಾಮವೇ ಹಬ್ಬದ ಅಚರಣೆಯಂತೆ ಭಾಗವಹಿಸಿದ್ದರು.



ಮೆರವಣಿಗೆಯಲ್ಲಿ ಭಾಗವಹಿಸಿದ್ದ ನಗರ ಶಾಸಕ ಡಾ.ಶಿವರಾಜ ಪಾಟೀಲ್ ಮಾತನಾಡಿ ಗ್ರಾಮ ಐತಿಹಾಸಿಕ ಶ್ರೀ ಸಂಗಮೇಶ್ವರ ದೇವಸ್ಥಾನ ಜೀರ್ಣೋದ್ಧಾರ ಅಂಗವಾಗಿ

ನೂತನ ಮೂರ್ತಿಗಳ ಪ್ರತಿಷ್ಠಾನ ಏ.23 ರಂದು ನಡೆಯಲಿದೆ. ಇಂದು ಮೂರ್ತಿಗಳ ಮೆರವಣಿಗೆ ನಡೆದಿದೆ. ಗ್ರಾಮದ ಸಮಸ್ತ ಜನರು ಒಂದಾಗಿ ಇತಿಹಾಸ ದೇವಸ್ಥಾನ ಅಭಿವೃದ್ಧಿಗೆ ಮುಂದಾಗಿರುವ ಮಾದರಿ ಕೆಲಸವಾಗಿದೆ ಎಂದರು. ಮೂರು ದಿನ ನಡೆಯಲಿರುವ ಕಾರ್ಯಕ್ರಮದಲ್ಲಿ ಭಕ್ತರು ಭಾಗವಹಿಸುವಂತೆ ಮನವಿ ಮಾಡಿದರು.

ದೇವಸ್ಥಾನ ಸಮಿತಿ ಮುಖಂಡ ಎಂ.ವಿರುಪಾಕ್ಷಿ ಮಾತನಾಡಿ ಗ್ರಾಮದ ಶ್ರೀ ಸಂಗಮೇಶ್ವರ ಉದ್ಭವ ಮೂರ್ತಿಯಾಗಿದೆ. ಹಳೆಯದಾಗಿರುವ ದೇವಸ್ಥಾನ ಅಭಿವೃದ್ಧಿಗೊಳಿಸಿ ನೂತನ ಶಿಲಾ ಮೂರ್ತಿಗಳನ್ನು ಸ್ಥಾಪಿಸಲಾಗುತ್ತದೆ.

ಪುಟ–2

## ಮಹಿಳಾ ಮೀಸಲಾತಿಗೆ ಬೆಂಬಲ, ಆದರೆ ಕ್ಷೇತ್ರ ಪುನರ್‌ವಿಂಗಡಣೆ ಸೇರಿಸುವುದು ಬಿಜೆಪಿಯ ರಾಜಕೀಯ ಹುನ್ನಾರ– ಶ್ರೀದೇವಿ ನಾಯಕ

ಸಹಾಯವಾಣಿ ಸುದ್ದಿ

ರಾಯಚೂರು: ಮಹಿಳಾ ಮೀಸಲಾತಿ ಕಾನೂನು ಮತ್ತು ಕ್ಷೇತ್ರ ಪುನರ್‌ವಿಂಗಡಣೆ ವಿಚಾರಕ್ಕೆ ಸಂಬಂಧಿಸಿದಂತೆ ದೆಹಲಿಯ ಸಂಸತ್ ಭವನದಲ್ಲಿ ಶುಕ್ರವಾರ ನಡೆದ ಮತ ಪ್ರಕ್ರಿಯೆಯಲ್ಲಿ ಎನ್ ಡಿಎ ಮೈತ್ರಿಕೂಟ ಸೋಲು ಕಂಡಿದ್ದು, ಮಹಿಳಾ ಮೀಸಲಾತಿ ಹೆಸರಿನಲ್ಲಿ ಎನ್‌ಡಿಎ ಸರ್ಕಾರದಿಂದ ರಾಜ–ಕೀಯ ನಡೆಸಲಾಗುತ್ತಿದೆ ಎಂದು ರಾಷ್ಟ್ರೀಯ ಮಹಿಳಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಶ್ರೀ ದೇವಿ ನಾಯಕ ಆರೋಪಿಸಿದರು.

ಅವರಿಂದು ಮಾಧ್ಯಮಗೋಷ್ಠಿಯನ್ನುದ್ದೇಶಿಸಿ ಮಾತನಾಡಿ, ಮಹಿಳಾ ಮೀಸಲಾತಿ ಕಾನೂನು ಜಾರಿಗೆ ತರುವ ಉದ್ದೇಶ ಇದ್ದರೆ ಕ್ಷೇತ್ರ ಪುನರ್‌ವಿಂಗಡಣೆ ವಿಷಯವನ್ನು ಅದಕ್ಕೆ ಜೋಡಿಸುವ ಅಗತ್ಯವಿರಲಿಲ್ಲ ಶೇ.33ರಷ್ಟು ಮೀಸಲಾತಿ ನೀಡುವ ಮಾತು ಕೇವಲ ರಾಜಕೀಯ ಲಾಭಕ್ಕಾಗಿ ಬಳಸಲಾಗುತ್ತಿದೆ ಎಂದು



ಹೇಳಿದರು.

2023ರಲ್ಲಿ ಇಂಡಿಯಾ ಮೈತ್ರಿಕೂಟದಲ್ಲಿರುವ ಎಲ್ಲಾ ಪಕ್ಷಗಳು ಮಹಿಳಾ ಮೀಸಲಾತಿಗೆ ಒಪ್ಪಿಗೆ ಸೂಚಿಸಿದ್ದರೂ, ಅದನ್ನು ಜಾರಿಗೆ ತರದೆ ಈಗ ಕ್ಷೇತ್ರ ಪುನರ್‌ವಿಂಗಡಣೆಯನ್ನು ಮುಂದಿಟ್ಟಿರುವುದು ರಾಜಕಿ ಯ ಷಡ್ಯಂತ್ರವಾಗಿದೆ. ಕಾಂಗ್ರೆಸ್ ಪಕ್ಷ ಯಾವತ್ತಿಗೂ ಮಹಿಳೆಯರ, ರೈತರ ಹಾಗೂ ಬಡವರ ಪರವಾಗಿ ರುವ ಪಕ್ಷವಾಗಿದ್ದು, ಮಹಿಳೆಯರ ಪರ ಹಲವಾರು ಯೋಜನೆಗಳನ್ನು ಜಾರಿಗೆ ತಂದಿದೆ. ಆದರೆ ಬಿಜೆಪಿ ಮೊದಲಿನಿಂದಲೂ ಮಹಿಳಾ ವಿರೋಧಿ ಪಕ್ಷವಾಗಿದೆ ಎಂದರು.

ಕ್ಷೇತ್ರ ಪುನರ್‌ವಿಂಗಡಣೆ ನಡೆದರೆ ಉತ್ತರ ಭಾರತದ ರಾಜ್ಯಗಳಿಗೆ ಜನಸಂಖ್ಯೆ ಆಧಾರದ ಮೇಲೆ ಹೆಚ್ಚಿನ ಸ್ಥಾನಗಳು ದೊರೆಯಲಿದ್ದು,ದಕ್ಷಿಣ ಭಾರತದ ರಾಜ್ಯಗಳಿಗೆ ಅನ್ಯಾಯವಾಗಲಿದೆ.

ಪುಟ–2

## 65 ಲಕ್ಷ ವೆಚ್ಚದಲ್ಲಿ ಕರಡಿಗುಡ್ಡದಲ್ಲಿ ನೂತನ ಆಸ್ಪತ್ರೆ ನಿರ್ಮಾಣಕ್ಕೆ ಚಾಲನೆ: ಗ್ರಾಮೀಣ ಆರೋಗ್ಯ ಸೇವೆಗೆ ಬಲ

ಸಹಾಯವಾಣಿ ಸುದ್ದಿ

ಮಾನ್ವಿ: ತಾಲೂಕಿನ ಕರಡಿಗುಡ್ಡ ಗ್ರಾಮದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಡಿಯಲ್ಲಿ ಅಂದಾಜು 65 ಲಕ್ಷ ರೂ. ವೆಚ್ಚದಲ್ಲಿ ನೂತನ ಆಸ್ಪತ್ರೆ ನಿರ್ಮಾಣ ಕಾಮಗಾರಿಗೆ ರಾಜ್ಯ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರಾದ ಎನ್.ಎಸ್. ಬೋಸರಾಜು ಶಂಕುಸ್ಥಾಪನೆ ನೆರವೇರಿಸಿ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, ರಾಜ್ಯ ಸರ್ಕಾರವು ಗ್ರಾಮೀಣ ಭಾಗದ ಸಾರ್ವಜನಿಕರಿಗೆ ಉತ್ತಮ ಗುಣ ಮಟ್ಟದ ಆರೋಗ್ಯ ಸೇವೆಗಳನ್ನು ಒದಗಿಸಲು ವಿಶೇಷ



ಆದ್ಯತೆ ನೀಡುತ್ತಿದೆ. ಕರಡಿಗುಡ್ಡ ಗ್ರಾಮದಲ್ಲಿ ನಿರ್ಮಾಣವಾಗುವ ಈ ಆಸ್ಪತ್ರೆ ಸ್ಥಳೀಯ ಜನರಿಗೆ ತುರ್ತು ಮತ್ತು ಮೂಲಭೂತ ಆರೋಗ್ಯ ಸೇವೆಗಳನ್ನು

ಪುಟ–2

## ಮಂತ್ರಾಲಯ ಮಠದಲ್ಲಿ 25 ಲಕ್ಷದ ಸಮುದಾಯ ಭವನಕ್ಕೆ ಚಾಲನೆ: ಪಟ್ಟಣದಲ್ಲಿ 5.26 ಕೋಟಿ ಅಭಿವೃದ್ಧಿ ಕಾಮಗಾರಿಗಳಿಗೆ ಗ್ರೀನ್ ಸಿಗ್ನಲ್

ಸಹಾಯವಾಣಿ ಸುದ್ದಿ

ಮಾನ್ವಿ: ಪಟ್ಟಣದ ಮಂತ್ರಾಲಯ ಶ್ರೀ ರಾಘವೇಂದ್ರ ಸ್ವಾಮಿಗಳ ಮಠದ ಆವರಣದಲ್ಲಿ ಸಾರ್ವಜನಿಕ ಹಾಗೂ ಧಾರ್ಮಿಕ ಕಾರ್ಯಕ್ರಮಗಳಿಗೆ ಅನುಕೂಲವಾಗುವ ನೂತನ ಸಮುದಾಯ ಭವನ ನಿರ್ಮಾಣಕ್ಕೆ ರಾಜ್ಯ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಎನ್.ಎಸ್. ಬೋಸರಾಜು ಶಂಕುಸ್ಥಾಪನೆ ನೆರವೇರಿಸಿ ಕಾಮಗಾರಿಗೆ ಚಾಲನೆ ನೀಡಿದರು.

2025–26ನೇ ಸಾಲಿನ ಸಿ.ಎಂ.ಐ.ಡಿ.ಪಿ ಯೋಜನೆಯಡಿ ಕೆ.ಆರ್.ಐ.ಡಿ.ಎಲ್ ಇಲಾಖೆಯ ಮೂಲಕ ಸುಮಾರು 25 ಲಕ್ಷ ರೂ. ವೆಚ್ಚದಲ್ಲಿ ಈ ಸಮುದಾಯ



ಭವನ ನಿರ್ಮಾಣವಾಗಲಿದ್ದು, ಮಠದ ಕಾರ್ಯಕ್ರಮಗಳು ಹಾಗೂ

ಪುಟ–2

ಒಂದನೇ ಪುಟದಿಂದ

# ಹಿಂದಿಗೆ ಅಂಕ ಕೊಡಿ

ಈ ಬಗ್ಗೆ ಪ್ರಶ್ನಿಸಿದೆ.ಎಸ್ಸೆಸ್ಸೆಲ್ಸಿ ಪರೀಕ್ಷೆ ಅಧಿಸೂಚನೆ ಹೊರಡಿಸಿದಾಗಲೇ ಇದನ್ನು ಸ್ಪಷ್ಟಪಡಿಸಬೇಕಿತ್ತು. ಅಧಿಸೂಚನೆಯಲ್ಲಿಲ್ಲದ ಗ್ರೇಡ್ ಪದ್ಧತಿಯನ್ನ ಈಗ ಅನುಷ್ಠಾನಗೊಳಿಸುತ್ತಿದ್ದೀರಿ? ಪಿಯುಸಿಯಲ್ಲಿ ಈಗ ಶೇ.83ರಷ್ಟು ವಿದ್ಯಾರ್ಥಿಗಳು ಉತ್ತೀರ್ಣರಾಗುತ್ತಿದ್ದಾರೆ.ನೀವು ಎಲ್ಲರನ್ನೂ ಪಾಸ್ ಮಾಡಬೇಕೆಂದಿದ್ದರೆ ಪರೀಕ್ಷೆಯನ್ನೇ ರದ್ದು ಮಾಡಿ. ನಿಯಮ ರೂಪಿಸಿದ ಬಳಿಕ ಸರ್ಕಾರ ಸೂಕ್ತವೆನಿಸಿದ ಕ್ರಮ ಕೈಗೊಳ್ಳಬಹುದು. ಆದರೆ ನಿಯಮ ರೂಪಿಸುವ ಮುಂಚಿನ ಪರೀಕ್ಷೆಯ ಅಂಕ ಪದ್ಧತಿ ಬದಲಾವಣೆ ಸೂಕ್ತವಲ್ಲ ಎಂದು ತಿಳಿಸಿ ಜೊತೆಗೆ 2025-26ನೇ ಸಾಲಿನ ಎಸ್ಎಸ್ಎಲ್‌ಸಿ ಹಿಂದಿ ಭಾಷೆಗೆ ಅಂಕ ನೀಡುವಂತೆ ಹೈಕೋರ್ಟ್ ಆದೇಶಿಸಿದೆ.

ಚಿಕ್ಕಮಗಳೂರಿನ ಸಹನಾ ಆರ್. ನಾಯ್ಕ್ ಸೇರಿ ಮೂವರು ವಿದ್ಯಾರ್ಥಿನಿಯರು ರಿಟ್ ಸಲ್ಲಿಸಿದ್ದರು. ಕೇಂದ್ರ ಸರ್ಕಾರದ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಹಿಂದಿ ಅಂಕ ಪರಿಗಣಿಸುತ್ತಾರೆ. ಗ್ರೇಡಿಂಗ್ ನೀಡುವುದರಿಂದ ಭವಿಷ್ಯದಲ್ಲಿ ತೊಂದರೆಯಾಗುತ್ತದೆ. ಹೀಗಾಗಿ ಗ್ರೇಡಿಂಗ್ ಬದಲು ಅಂಕ ನೀಡುವಂತೆ ನಿರ್ದೇಶನ ನೀಡುವಂತೆ ಕೋರಿದ್ದರು. ಇನ್ನು ಕೋರ್ಟ್‌ನ ಈ ಆದೇಶ ಎಸ್ಎಸ್ಎಲ್‌ಸಿ ಪರೀಕ್ಷೆಯ ಎಲ್ಲ ತೃತೀಯ ಭಾಷೆಗೂ ಅನ್ವಯ ಆಗಲಿದೆ.

ಕೆಲವು ವರ್ಷಗಳಿಂದ ಕರ್ನಾಟಕದಲ್ಲಿ ತೃತೀಯ ಭಾಷೆ ವಿಷಯಕ್ಕೆ ಸಂಬಂಧಿಸಿದಂತೆ ಗ್ರೇಡಿಂಗ್ ವ್ಯವಸ್ಥೆ ಜಾರಿಗೆ ತರಲು ಶಿಕ್ಷಣ ಇಲಾಖೆ ಆಸಕ್ತಿ ತೋರಿತ್ತು. ಇತ್ತೀಚೆಗೆ ಆ ಬಗ್ಗೆ ಅಧಿಕೃತ ಆದೇಶ ಘೋಷಣೆ ಮಾಡಿತ್ತು. ಪ್ರಥಮ ಮತ್ತು ದ್ವಿತೀಯ ಭಾಷೆಗಳಿಗೆ ನೀಡುವ ಪ್ರಾಮುಖ್ಯತೆಯನ್ನು ತೃತೀಯ ಭಾಷೆಗೆ ನೀಡದೆ, ಅದನ್ನು ಕೇವಲ ಅರ್ಹತಾ ವಿಷಯವನ್ನಾಗಿ ಪರಿವರ್ತಿಸಲು ಸರ್ಕಾರ ಮುಂದಾಗಿತ್ತು. ಇದು ಹಿಂದಿ ಭಾಷಾ ಶಿಕ್ಷಕರ ಸಂಘ ಮತ್ತು ಪೋಷಕರ ಭಾರೀ ಆಕ್ರೋಶಕ್ಕೆ ಕಾರಣವಾಗಿತ್ತು.

ಈ ವಿವಾದವು ಕೇವಲ ಅಂಕಗಳಿಗೆ ಸೀಮಿತವಾಗದೆ, ಭಾಷಾ ನೀತಿಯ ಸಂಘರ್ಷವಾಗಿಯೂ ಬದಲಾಗಿತ್ತು. ತೃತೀಯ ಭಾಷೆಗೆ ಅಂಕ ನೀಡದಿದ್ದರೆ ವಿದ್ಯಾರ್ಥಿಗಳು ಆ ವಿಷಯದ ಕಡೆಗೆ ಆಸಕ್ತಿ ಕಳೆದುಕೊಳ್ಳುತ್ತಾರೆ ಮತ್ತು ಇದು ಭವಿಷ್ಯದಲ್ಲಿ ಉದ್ಯೋಗ ಹಾಗೂ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಅವರಿಗೆ ಹಿನ್ನಡೆಯಾಗಬಹುದು ಎಂಬ ವಾದ ಕೇಳಿಬಂದಿತ್ತು.

ಹೈಕೋರ್ಟ್ ನ್ಯಾಯಮೂರ್ತಿ ಇಂದಿರೇಶ್,ನಿಮ್ಮ ಅಧಿಸೂಚನೆಯ ಉದ್ದೇಶ ಏನು? ಕಳೆದ ವರ್ಷ 1.75 ಲಕ್ಷ ವಿದ್ಯಾರ್ಥಿಗಳು ಫೇಲ್ ಆಗಿದ್ದರು ಎಲ್ಲರನ್ನೂ ಪಾಸ್ ಮಾಡೋದಾ ನಿಮ್ಮ ಅಧಿಸೂಚನೆ? ನಿಮ್ಮ ಉದ್ದೇಶ ಅದಾಗಿರುವುದಿಲ್ಲ ಎಂದರು.

ಶಶಿಕಿರಣ್ ಶೆಟ್ಟಿ ವಾದಿಸಿ, ಫೇಲ್ ಆಗಿದ್ದರೆ ಒಳ್ಳೆಯ ಶಿಕ್ಷಕರರನ್ನು ನೇಮಕ ಮಾಡಿ. ಹಿಂದಿ ಭಾಷೆ ಕಲಿಯಲಿ ಬಿಡಿ. ತೃತೀಯ ಭಾಷೆ ಒಮ್ಮೆ ಕನ್ನಡವೂ ಆಗಿರಲಿದೆ ಅಲ್ವಾ. ಇಲ್ಲಿ ಹಿಂದಿ ತೃತೀಯ ಭಾಷೆ ವಿಚಾರಕ್ಕೆ ಗ್ರೇಡಿಂಗ್ ವ್ಯವಸ್ಥೆ ತರಲಾಗಿದೆ.

ಹಿಂದಿ ಭಾಷೆಯಿಂದ ವಿದ್ಯಾರ್ಥಿಗಳ ಮೇಲೆ ಹೊರೆ ಜಾಸ್ತಿಯಾಗಿದೆ. ನಾವು ಬೇರೆ ಸಬ್ಜೆಕ್ಟಳ ಬಗ್ಗೆ ಹೇಳುತ್ತಿಲ್ಲ. ತೃತೀಯ ಭಾಷೆ ಹಿಂದಿ ಬಗ್ಗೆಯಷ್ಟೆ. ಶೇ.80 ರಷ್ಟು ಗ್ರಾಮೀಣ ಭಾಗದ ವಿದ್ಯಾರ್ಥಿಗಳು ಇದರಿಂದ ಫೇಲ್ ಆಗುತ್ತಿದ್ದಾರೆ ಎಂದು ತಿಳಿಸಿದರು.

ಎಲ್ಲರನ್ನೂ ಪಾಸು ಮಾಡುವ ನಿಮ್ಮ ಉದ್ದೇಶ ಸರಿ ಇರಬಹುದು. ಅದು ಕೇಳಲು ಚೆನ್ನಾಗಿದೆ. ಈ ವರ್ಷ ಹೀಗೆ ಇರಲಿ. ಮುಂದಿನ ವರ್ಷದಿಂದ ನೀವು ಇದನ್ನು ಮಾಡಬಹುದು. ಮುಂದಿನ ವರ್ಷ ಅಗತ್ಯ ಕ್ರಮ ತೆಗೆದುಕೊಳ್ಳಬಹುದು ಅಲ್ವಾ ಎಂದು ಹೇಳಿದ ನ್ಯಾಯಮೂರ್ತಿ ಇಂದಿರೇಶ್ ಅಂಕಗಳನ್ನು ನೀಡಲು ನಿರ್ದೇಶಿಸಿದರು.

ಮಾರ್ಚ್ 18 ರಿಂದ ಏಪ್ರಿಲ್ 2 ರವರೆಗೆ ಎಸ್ಎಸ್ಎಲ್‌ಸಿ ಪರೀಕ್ಷೆ ನಡೆದಿದೆ. ಏಪ್ರಿಲ್ 10 ರಂದು ಕರಡು ನಿಯಮಗಳನ್ನು ರೂಪಿಸಲಾಗಿದೆ. ಹೀಗಾಗಿ, ತನ್ನ ಆದೇಶ ಮರುಪರಿಶೀಲಿಸಲು ಹೈಕೋರ್ಟ್ ನಿರಾಕರಿಸಿದೆ.

## ಅರವಿಂದ ಕೇಜ್ರಿವಾಲ್ ಅರ್ಜಿ ವಜಾ

ಸಾಧ್ಯವಾದರೆ, ರಾಜಕಾರಣಿಯ ಮಕ್ಕಳು ರಾಜಕಾರಣಿಗಳಾಗಲು ಸಾಧ್ಯವಾದರೆ. ನ್ಯಾಯಾಧೀಶರ ಮಕ್ಕಳು ಕಾನೂನು ವೃತ್ತಿಯನ್ನು ಪ್ರವೇಶಿಸಲು ಸಾಧ್ಯವಿಲ್ಲ ಎಂದು ಹೇಗೆ ಹೇಳಬಹುದು ಎಂದು ನ್ಯಾಯಾಲಯ ಹೇಳಿದೆ.

ಕುಟುಂಬ ಸದಸ್ಯರು ಸರ್ಕಾರಿ ಕಾನೂನು ಸಮಿತಿಗಳ ಭಾಗವಾಗಿದ್ದರೂ ಸಹ, ಪ್ರಕರಣಕ್ಕೆ ನೇರವಾಗಿ ಸಂಬಂಧಿಸಿಲ್ಲದಿದ್ದರೆ ಅದು ಸ್ವಯಂಚಾಲಿತವಾಗಿ ಸಂಘರ್ಷ ಸೃಷ್ಟಿಸುವುದಿಲ್ಲ .ವಕೀಲರು ರಾಜಕೀಯ ಪಕ್ಷಗಳನ್ನು ಪ್ರತಿನಿಧಿಸಬಹುದು, ಆದರೆ ತೀರ್ಪುಗಳು ಅರ್ಹತೆಯ ಆಧಾರದ ಮೇಲೆ ಮಾತ್ರ ಆಧಾರಿತವಾಗಿವೆ ಎಂದು ನ್ಯಾಯಾಲಯ ಸ್ಪಷ್ಟಪಡಿದೆ.

## ಇಂದಿನಿಂದ ಸಿಇಟಿ ಪರೀಕ್ಷೆ : 3.30 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳ ನೋಂದಣಿ

ಪರೀಕ್ಷಾ ಕೊಠಡಿಗೆ ಪ್ರವೇಶಿಸುವಾಗಿ ಶೂ ಧರಿಸಿದವರು ಹೊರಗೆ ಬಿಟ್ಟು ಪರೀಕ್ಷೆ ಬರೆಯುವುದು ಕಡ್ಡಾಯವಾಗಿದೆ.ವಿದ್ಯಾರ್ಥಿಗಳು ಖಡ್ಗ ಸೇರಿದಂತೆ ಯಾವುದೇ ಲೋಹದ ಆಭರಣಗಳನ್ನು ಧರಿಸುವುದನ್ನು ನಿಷೇಧಿಸಲಾಗಿದೆ. ವಿದ್ಯಾರ್ಥಿನಿಯರು ಸರಳವಾದ ಬಟ್ಟೆಗಳನ್ನು ಧರಿಸಬೇಕು. ಎತ್ತರವಾದ ಹಿಮಡಿಯ ಶೂ, ಚಪ್ಪಲಿ ಧರಿಸಬಾರದು.

ಮೊಬೈಲ್ ಫೋನ್‌ಗಳು ಹಾಗೂ ಎಲೆಕ್ಟ್ರಾನಿಕ್ ವಸ್ತುಗಳನ್ನು ಪರೀಕ್ಷಾ ಕೊಠಡಿಯೊಳಗೆ ನಿಷೇಧಿಸಲಾಗಿದೆ. ತಿನ್ನುವ ವಸ್ತು ಹಾಗೂ ಲೋಹದ ಕುಡಿಯುವ ನೀರಿನ ಬಾಟಲ್‌ಗಳನ್ನು ಕೂಡ ಕೊಠಡಿಯೊಳಗೆ ನಿಷೇಧಿಸಲಾಗಿದೆ. ನೀರಿನ ವ್ಯವಸ್ಥೆಯನ್ನು ಕಲ್ಪಿಸಲಾಗುವುದು, ಯಾವುದೇ ರೀತಿಯ ಮುಖಮುಚ್ಚುವ ಮಾಸ್ಕ್ ಆಗಲಿ ಟೋಪಿ ಆಗಲಿ ಧರಿಸುವುದು ಕೂಡಾ ನಿರ್ಬಂಧಿಸಲಾಗಿದೆ.

ಪ್ರವೇಶ ಪತ್ರವನ್ನು ಎಲ್ಲಾ ಅಭ್ಯರ್ಥಿಗಳು ಕಡ್ಡಾಯವಾಗಿ ತರಬೇಕು ಮತ್ತು ಸರ್ಕಾರದಿಂದ ಮಾನ್ಯತೆ ಪಡೆದ ಫೋಟೋ ಗುರುತಿನ ಚೀಟಿ ಕೂಡ ತರಬೇಕು. ಪರೀಕ್ಷೆಯ ಕೊನೆಯ ಬೆಲ್ ಆಗುವವರೆಗೂ ಕೊಠಡಿಯಿಂದ ಯಾವುದೇ ವಿದ್ಯಾರ್ಥಿಗಳನ್ನು ಕಳುಹಿಸಲು ಅನುಮತಿ ಇರುವುದಿಲ್ಲ.

ಈಗಾಗಲೇ ತಿಳಿಸಿರುವಂತೆ ಈ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸಬೇಕೆಂದು ಸಿಇಟಿ ಪರೀಕ್ಷೆ ಬರೆಯುವ ವಿದ್ಯಾರ್ಥಿಗಳಿಗೆ ಸೂಚಿಸಲಾಗಿದೆ. ಪರೀಕ್ಷಾ ಕೇಂದ್ರಗಳ ಸುತ್ತಲೂ ಕೂಡ ಪೊಲೀಸರು ಬಿಗಿ ಭದ್ರತೆಗಳನ್ನು ಕಲ್ಪಿಸಲಾಗಿದ್ದು, ಯಾವುದೇ ರೀತಿಯ ಅಹಿತಕರ ಘಟನೆಗಳು ನಡೆಯದಂತೆ ಗಸ್ತು ಭದ್ರತಾ ವಾಹನಗಳನ್ನು ಕೂಡಾ ನಿಯೋಜಿಸಲಾಗಿದೆ.

## ಮಹಿಳಾ ಮೀಸಲಾತಿಗೆ ಬೆಂಬಲ, ಆದರೆ ಕ್ಷೇತ್ರ ಪುನರ್‌ವಿಂಗಡಣೆ ಸೇರಿಸುವುದು ಬಿಜೆಪಿಯ ರಾಜಕೀಯ ಹುನ್ನಾರ- ಶ್ರೀದೇವಿ ನಾಯಕ

ಪರಿಣಾಮವಾಗಿ ಒಬಿಸಿ ಹಾಗೂ ಎಸ್‌ಸಿ, ಎಸ್‌ಟಿ ಮಹಿಳೆಯರು ಕೂಡ ಅವಕಾಶದಿಂದ ವಂಚಿತರಾಗುವ ಸಾಧ್ಯತೆ ಇದೆ ಎಂದು ಹೇಳಿದರು. ಬಿಜೆಪಿ ಪಕ್ಷವು ಸ್ವತಃ ಮಹಿಳಾ ವಿರೋಧಿ ಪಕ್ಷವಾಗಿದ್ದು, ಕಾಂಗ್ರೆಸ್ ಮೇಲೆ ಮಹಿಳಾ ವಿರೋಧಿ ಎಂಬ ಆರೋಪ ಹೇರಲು ಪೂರ್ವನಿಯೋಜಿತ ಕುತಂತ್ರ ನಡೆಸುತ್ತಿದೆ ಎಂದು ಆರೋಪಿಸಿದರು. 2011ರ ಜನಗಣತಿ ಅಂಕಿ ಅಂಶಗಳ ಆಧಾರದ ಮೇಲೆ ಕ್ಷೇತ್ರ ಪುನರ್‌ವಿಂಗಡಣೆ ಮಾಡುವುದು ಅವೈಜ್ಞಾನಿಕವಾಗಿದ್ದು, ಹೊಸ ಜನಗಣತಿ ಮಾಹಿತಿಯ ಆಧಾರದ ಮೇಲೆ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು. ಮೋದಿ ಸರ್ಕಾರದ ವಿರುದ್ಧ ಪ್ರತಿಭಟನೆಗೆ ಸನ್ನಿವೇಶಗಳು ನಿರ್ಮಾಣವಾಗುತ್ತಿವೆ ಎಂದು ಎಚ್ಚರಿಕೆ ನೀಡಿದ ಅವರು, ಮಹಿಳೆಯರು ಈ ವಿಷಯವನ್ನು ಸರಿಯಾಗಿ ಅರ್ಥ ಮಾಡಿಕೊಳ್ಳಬೇಕು. ಬಿಜೆಪಿ ಪಕ್ಷ ಮಹಿಳಾ ಪರವಾಗಿದ್ದರೆ ಕ್ಷೇತ್ರ ವಿಂಗಡಣೆ ಎಂಬ ಅಂಶವನ್ನು ಬಿಟ್ಟು ಮೊದಲು ಮಹಿಳಾ ಮೀಸಲಾತಿ ಕಾನೂನು ಜಾರಿಗೆ ತರಲಿ ಎಂದು ಸವಾಲು ಹಾಕಿದರು. ಈ ಸಂದರ್ಭದಲ್ಲಿ ಪ್ರಮುಖರಾದ ಭಾಗ್ಯಶ್ರೀ , ಶಶಿಕಲಾ ಭಿಮರಾಯ, ಮಂಜುಳಾ, ಪ್ರೇಮಲತಾ, ನಿತ್ಯ, ಮಾಲಾ ಭಜಂತ್ರಿ, ತಿಮಲಮ್ಮ ಸೇರಿ ಅನೇಕರಿದ್ದರು.

## ಮಂತ್ರಾಲಯ ಮಠದಲ್ಲಿ 25 ಲಕ್ಷದ ಸಮುದಾಯ ಭವನಕ್ಕೆ ಚಾಲನೆ: ಪಟ್ಟಣದಲ್ಲಿ 5.26 ಕೋಟಿ ಅಭಿವೃದ್ಧಿ ಕಾಮಗಾರಿಗಳಿಗೆ ಗ್ರೀನ್ ಸಿಗ್ನಲ್

ಬದ್ಧವಾಗಿದೆ ಎಂದರು. ವಿವಿಧ ಸಮುದಾಯಗಳಿಂದ ಬಂದ ಬೇಡಿಕೆಗಳ ಹಿನ್ನೆಲೆಯಲ್ಲಿ ವೀರಶೈವ, ಗಂಗಾಮತಸ್ಥ, ಯಾದವ್, ಸವಿತಾ, ನೇಕಾರ ಹಾಗೂ ಇತರ ಸಮುದಾಯಗಳಿಗೆ ಸಮುದಾಯ ಭವನಗಳ ನಿರ್ಮಾಣ ಮತ್ತು ಅಭಿವೃದ್ಧಿಗೆ ಅನುದಾನ ಮಂಜೂರು ಮಾಡಲಾಗಿದೆ ಎಂದು ಹೇಳಿದರು.

ಇದಲ್ಲದೆ, ಮಾನ್ವಿ ಪುರಸಭೆ ವ್ಯಾಪ್ತಿಯ ವಿವಿಧ ವಾರ್ಡ್‌ಗಳಲ್ಲಿ ಅಮೃತ ನಗರೋತ್ಥಾನ ಯೋಜನೆಯಡಿ ಸಿ.ಸಿ ರಸ್ತೆ, ಚರಂಡಿ ಸೇರಿದಂತೆ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗೆ 2.15 ಕೋಟಿ ರೂ. ಮೀಸಲಿಡಲಾಗಿದ್ದು, ಒಟ್ಟು 5.26 ಕೋಟಿ ರೂ. ಮೌಲ್ಯದ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಇಂದು ಚಾಲನೆ ನೀಡಲಾಗಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಶಾಸಕ ಹಂಪಯ್ಯನಾಯಕ, ಮಾಜಿ ಶಾಸಕರಾದ ಬ್ಯಾಗವಾಟ್ ಬಸನಗೌಡ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಅಬ್ದುಲ್‌ಗಫೂರ್ ಸಾಬ್, ಪಂಚ ಗ್ಯಾರಂಟಿಗಳ ತಾಲೂಕು ಅಧ್ಯಕ್ಷರಾದ ಬಿ.ಕೆ. ಅಮರೇಶಪ್ಪ ವಕೀಲರು, ಜಿಲ್ಲಾ ಪಂಚಾಯತ್ ಮಾಜಿ ಅಧ್ಯಕ್ಷರಾದ ದೊಡ್ಡಬಸಪ್ಪ ಗೌಡ ಭೋಗವತಿ, ಮಹಾಂತೇಶಸ್ವಾಮಿ, ಶಿವರಾಜ್ ನಾಯಕ್ ವಕೀಲರು, ರಾಜಾ ಸುಭಾಷ್ಚಂದ್ರನಾಯಕ, ತಾಲೂಕು ನಗರೇಶ್ವರ ಯರ್ವೈಶ್ಯ ಸಂಘದ ಅಧ್ಯಕ್ಷರಾದ ಆರ್. ಮುತ್ತುರಾಜ್ ಶೆಟ್ಟಿ, ಶ್ರೀಮಠದ ವಿಚಾರಣಕರ್ತರು ಹಾಗೂ ತಾಲೂಕು ವಿಪ್ರ ಸಮಾಜದ ಅಧ್ಯಕ್ಷರಾದ ಮುದ್ದುರಂಗರಾವ್ ಮುತ್ತಲಿಕ್, ರಾಮಾಂಜನೇಯ್ಯ ಶೆಟ್ಟಿ, ಡಾ. ವಿಜಯರಾವ್ ಕುಪನೇಶಿ, ವಿಜಯೀಂದ್ರ ಇಭ್ರಮಪೂರ್ ಸೇರಿದಂತೆ ಬ್ರಾಹ್ಮಣ ಹಾಗೂ ಯರ್ವೈಶ್ಯ ಸಮುದಾಯದ ಮುಖಂಡರು ಉಪಸ್ಥಿತರಿದ್ದರು.

## 65 ಲಕ್ಷ ವೆಚ್ಚದಲ್ಲಿ ಕರಡಿಗುಡ್ಡದಲ್ಲಿ ನೂತನ ಆಸ್ಪತ್ರೆ ನಿರ್ಮಾಣಕ್ಕೆ ಚಾಲನೆ: ಗ್ರಾಮೀಣ ಆರೋಗ್ಯ ಸೇವೆಗೆ ಬಲ

ದಾರರು ಸಮನ್ವಯದಿಂದ ಕಾರ್ಯನಿರ್ವಹಿಸಬೇಕು. ಕಾಮಗಾರಿಗಳನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸಿ ಸಾರ್ವಜನಿಕರಿಗೆ ಉಪಯೋಗವಾಗುವಂತೆ ನೋಡಿಕೊಳ್ಳಬೇಕು ಎಂದು ಸೂಚಿಸಿದರು.

ಈ ಯೋಜನೆಯಿಂದ ಸುತ್ತಮುತ್ತಲಿನ ಗ್ರಾಮಗಳ ಜನರಿಗೆ ಆರೋಗ್ಯ ಸೇವೆಗಳ ಪ್ರಾಪ್ತಿ ಸುಲಭವಾಗಲಿದ್ದು, ಗ್ರಾಮೀಣ ಆರೋಗ್ಯ ಮೂಲಸೌಕರ್ಯ ಮತ್ತಷ್ಟು ಬಲವಾಗಲಿದೆ ಎಂಬ ನಿರೀಕ್ಷೆ ವ್ಯಕ್ತವಾಗಿದೆ.

ಈ ಸಂದರ್ಭದಲ್ಲಿ ಶಾಸಕ ಜಿ. ಹಂಪಯ್ಯ ನಾಯಕ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಅಬ್ದುಲ್ ಗಫುರ್ ಸಾಬ್, ತಾ. ಗ್ಯಾರಂಟಿ ಸಮಿತಿ ಅಧ್ಯಕ್ಷರಾದ ಬಿ.ಕೆ. ಅಮರೇಶಪ್ಪ ವಕೀಲರು, ರುದ್ರಪ್ಪ ಅಂಗಡಿ, ಲಿಂಗಪ್ಪ ಕರಡಿಗುಡ್ಡ ಗುತ್ತೇದಾರರು, ಗೋಪಾಲ್ ನಾಯಕ್ ಕರಡಿಗುಡ್ಡ, ಸೈಯದ್ ಖಾಲಿದ್ ಖಾದ್ರಿ, ಚಾಂದ್ ಪಾಷಾ ಗುತ್ತೇದಾರರು, ಬುದ್ದೀನ್ ನಸಲಾಪುರ್, ಎಸ್. ಫಯಾಜುದ್ದೀನ್, ಸತ್ತಾರ್ ಬಂಗ್ಲೆವಲೇ, ರಸುಲ್ ಖುರೇಶಿ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

## ಬಂಗಾಳಿ ನಿವಾಸಿಗಳಿಗೆ ದೊರೆಯದ ಬಿಪಿಎಲ್, ಭೂ ದಾಖಲೆ, ಮತದಾರ ಕಾರ್ಡ್

ಸೌಲಭ್ಯಗಳು ಸಿಗದೇ, ಖಾಸಗಿ ಸಾಲಗಾರರ ಮೇಲೆ ಅವಲಂಬಿತರಾಗಬೇಕಾದ ಪರಿಸ್ಥಿತಿ ಉಂಟಾಗಿದೆ ಎಂದು ತಿಳಿಸಿದರು. ಜಾತಿ ಮತ್ತು ಸಾಮಾಜಿಕ ಗುರುತಿನ ವಿಚಾರದಲ್ಲಿ, ನಾಮಶೂದ್ರ, ಪೊಂದ್ರ, ಮಾಝಿ ಮೊದಲಾದ ಸಮುದಾಯಗಳು ಪಶ್ಚಿಮ ಬಂಗಾಳದಲ್ಲಿ ಪರಿಶಿಷ್ಟ ಜಾತಿಗೆ ಸೇರಿದವರಾಗಿದ್ದರೂ, ಕರ್ನಾಟಕದಲ್ಲಿ ಅವರಿಗೆ ಮೀಸಲಾತಿ ಸೌಲಭ್ಯಗಳು ದೊರೆಯುತ್ತಿಲ್ಲ. ಇದರ ಪರಿಣಾಮವಾಗಿ ವಿದ್ಯಾರ್ಥಿಗಳು ಉನ್ನತ ಶಿಕ್ಷಣ ಮತ್ತು ಸರ್ಕಾರಿ ಉದ್ಯೋಗಗಳಿಂದ ವಂಚಿತರಾಗುತ್ತಿದ್ದಾರೆ.

ಸರ್ಕಾರ್ ಎಂಬ ಕುಟುಂಬ ಹೆಸರನ್ನು ಬಳಸುತ್ತಿರುವುದರಿಂದ ಆಡಳಿತಾತ್ಮಕ ಗೊಂದಲ ಉಂಟಾಗಿ, ಜಾತಿ ಪ್ರಮಾಣ ಪತ್ರ ಸೇರಿದಂತೆ ಹಲವು ದಾಖಲೆಗಳನ್ನು ಪಡೆಯಲು ತೊಂದರೆ ಆಗುತ್ತಿದೆ. ಇದನ್ನು ಕುಟುಂಬ ಹೆಸರಾಗಿ ಪರಿಗಣಿಸುವಂತೆ ಸರ್ಕಾರ ಸ್ಪಷ್ಟ ನಿರ್ದೇಶನ ನೀಡಬೇಕು ಎಂದು ಒತ್ತಾಯಿಸಿದರು.

ಬೆಂಗಾಳಿ ಭಾಷೆಯ ಪ್ರಾಥ ಮಿಕ ಶಿಕ್ಷಣವನ್ನು ಹಳೆಯದಾಗಿ ನೀಡಲಾಗುತ್ತಿತ್ತಾದರೂ, ಇತ್ತೀಚಿನ ವರ್ಷಗಳಲ್ಲಿ ಅದನ್ನು ಸ್ಥಗಿತಗೊಳಿಸಲಾಗಿದೆ. ಬೆಂಗಾಳಿ ಭಾಷಾ ಶಿಕ್ಷಕರನ್ನು ಮರುನಿಯೋಜಿಸುವಂತೆ ಆಗ್ರಹಿಸಿದರು.

ಹಾಗೆಯೇ ಮತದಾರರ ಗುರುತಿನ ಚೀಟಿ ಮತ್ತು ರೇಷನ್ ಕಾರ್ಡ್ ನೀಡುವಲ್ಲಿ ಅನಗತ್ಯ ದಾಖಲೆಗಳನ್ನು ಕೇಳಲಾಗುತ್ತಿದ್ದು, ಹಲವಾರು ಕುಟುಂಬಗಳು ಬಿಪಿಎಲ್ ಸೌಲಭ್ಯಗಳಿಂದ ವಂಚಿತರಾಗಿದ್ದಾರೆ. ನಾವು ವಲಸಿಗರಲ್ಲ, ಸರ್ಕಾರದಿಂದ ಪುನರ್ವಸತಿ ಪಡೆದ ನಾಗರಿಕರು ಎಂಬುದನ್ನು ಆಡಳಿತ ಅರಿಯಬೇಕು ಎಂದು ಹೇಳಿದರು.

ಇನ್ನೂ 90 ದಿನಗಳಲ್ಲಿ ಕ್ರಮ ಕೈಗೊಳ್ಳದಿದ್ದರೆ, ಸಿಂಧನೂರಿನಿಂದ ರಾಯಚೂರುವರೆಗೆ ನ್ಯಾಯ ಪಾದಯಾತ್ರೆ ನಡೆಸಲಾಗುವುದು, ಜಿಲ್ಲಾಧಿಕಾರಿ ಕಚೇರಿ ಎದುರು ಅನಿರ್ದಿಷ್ಟಾವಧಿ ಧರಣಿ ಹಮ್ಮಿಕೊಳ್ಳಲಾಗುವುದು ಹಾಗೂ ಈ ಹೋರಾಟವನ್ನು ರಾಜ್ಯ ಮತ್ತು ರಾಷ್ಟ್ರೀಯ ಮಟ್ಟಕ್ಕೆ ವಿಸ್ತರಿಸಲಾಗುವುದು ಎಂದು ಎಚ್ಚರಿಸಿದರು.

ನಂತರ ಬಂಗಾಳಿ ಸಮುದಾಯದ ಪ್ರತಿನಿಧಿಗಳು ಜಿಲ್ಲಾಧಿಕಾರಿ ಕೆ.ನಿತೀಶ್ ಅವರನ್ನು ಭೇಟಿ ಮಾಡಿದರು. ಬಂಗಾಳಿ ಸಮುದಾಯದ ನೋವುಗಳನ್ನು ಆಲಿಸಿದ ಜಿಲ್ಲಾಧಿಕಾರಿ ಸ್ಥಳದಲ್ಲಿದ್ದ ಹಿರಿಯ ಅಧಿಕಾರಿಗಳಿಗೆ ಈ ಕೂಡಲೇ ಸಮುದಾಯದ ಸಮಸ್ಯೆಗಳ ಪರಿಹಾರಕ್ಕಾಗಿ ವಿಶೇಷ ಸಮನ್ವಯ ಸಮಿತಿ ರಚಿಸಲು ಸೂಚಿಸಿದರು ಎಂದು ಸಮುದಾಯದ ಪ್ರಮುಖರು ಪತ್ರಿಕೆಗೆ ತಿಳಿಸಿದ್ದಾರೆ. ಈ ಸಮಿತಿಯು ಬಂಗಾಳಿ ಕ್ಯಾಂಪ್ ಗಳಿಗೆ ಭೇಟಿ ನೀಡಿ, ಭೂ ದಾಖಲೆಗಳ ಸಮಸ್ಯೆಗಳು ಮತ್ತು ಸಾಮಾಜಿಕ ಗುರುತಿನ ಅಡಚಣೆಗಳ ಬಗ್ಗೆ ಸಮಗ್ರ ವರದಿ ನೀಡಲಿದೆ ಎಂದು ಅವರು ಡಿಸಿ ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಸುಬ್ರತ್ ಕುಮಾರ್ ವಿಶ್ವಾಸ್ ಅವರೊಂದಿಗೆ ಸಮಾಜದ ಹಿರಿಯ ಮತ್ತು ಸಕ್ರಿಯ ಸದಸ್ಯರು ಉಪಸ್ಥಿತರಿದ್ದು ಹೋರಾಟಕ್ಕೆ ಬೆಂಬಲ ನೀಡಿದರು. ಈ ಸಂದರ್ಭದಲ್ಲಿ ಸಂಘಟನೆಯ ಪ್ರಮುಖರಾದ ಸುಬ್ರತ್ ಕುಮಾರ್ ವಿಶ್ವಾಸ್, ನಿತಾಯ್ ತರಫದಾರ್, ಸಾಧನ್ ಸನ್ ಸಾನಾ, ಸುನಿಲ್ ಮಿಸ್ತ್ರಿ, ಶ್ರೀದುಲ್ ದತ್ತಾ, ಸರೋಜಿತ್ ಗೈನ್, ಅರ್ಜುನ್ ಗೋಲ್ಡರ್, ಸಾಧನ್ ಮಂಡಲ್, ಸಮರೇಶ್ ಮಂಡಲ್, ಬಿತ್ತು ರಾಯ್, ದಿನೇಶ್ ರಾಯ್, ಸುಖ ಮಂಡಲ್, ಸಾಗರ್ ಮಂಡಲ್, ಕನಕ್ ಮಂಡಲ್, ಕುಮಾರೇಶ್ ಮಂಡಲ್, ಪ್ರಮೋದ್ ಮಿಸ್ತ್ರಿ, ಧರ್ಮೇಂದ್ರ ಬಿಸ್ವಾಸ್, ಪಿಯೂಷ್ ಮಿರ್ಧಾ, ಪ್ರದೀಪ್ ದಾಸ್, ದಿಲೀಪ್ ಸರ್ಕಾರ್, ರಂಜಿತ್ ದತ್ತಾ ಮತ್ತು ಸುಧಾನಾ ಸಿಕಂದರ್. ಮತ್ತು ಬೆಂಗಾಳಿ ಸಮುದಾಯದ ಮುಖಂಡರು ಭಾಗವಹಿಸಿದ್ದರು.

## ಹೊಸೂರು ಗ್ರಾಮದ ಶ್ರೀ ಸಂಗಮೇಶ್ವರ ದೇವಸ್ಥಾನ ನೂತನ ಶಿಲಾ ಮೂರ್ತಿಗಳ ಭವ್ಯ ಮೆರವಣಿಗೆ

ಗ್ರಾಮ ಸರ್ವ ಜಾತಿ,ಧರ್ಮವರು ಬೆಂಬಲಿಸಿ ಅದ್ದೂರಿ ಮೂರು ದಿನ ಕಾರ್ಯಕ್ರಮ ನಡೆಸಲಾಗುತ್ತಿದೆ. ಭಕ್ತರು ಭಾಗವಹಿಸುವಂತೆ ಮನವಿ ಮಾಡಿದರು.

ಮೆರವಣಿಗೆಯಲ್ಲಿ ಪ್ರಜಾಪಿತ ಬ್ರಹ್ಮ ಕುಮಾರಿ ಈಶ್ವರಿಯ ವಿಶ್ವವಿದ್ಯಾಲಯದ ರಾಜಯೋಗಿನಿ ಸ್ತ್ರೀತಕ್ಕ, ಯುವ ಕಾಂಗ್ರೆಸ್ ಮುಖಂಡ ರವಿ ಬೋಸರಾಜ, ಮಹ್ಮದ ಶಾಲಂ, ಪಾಲಿಕೆ ಮಾಜಿ ಸದಸ್ಯ ಜಯಣ್ಣ, ನರಸಿಂಹಲು ಮಾಡಗಿರಿ, ರುದ್ರಪ್ಪ ಅಂಗಡಿ, ಶಿವಪ್ಪ ಮಾಲಿ ಪಾಟೀಲ ಹೊಸೂರು, ರವೀಂದ್ರ ಜಲ್ದಾರ, ಭೀಮಣ್ಣ ಮಂಚಾಲ, ಹನುಮಂತಪ್ಪ ಸೇರಿದಂತೆ ಗ್ರಾಮದ ಹಿರಿಯರು, ಮಹಿಳೆಯರು ಜನರು ಭಾಗಿ ಯಾದರು.

## ಬಸವಣ್ಣನವರ ಆರಾಧ್ಯ ದೈವ, ಮನೆದೇವ್ರು ಯಾದಗಿರಿ ಜಿಲ್ಲೆಯ ವಡಗೇರಿಯ ಸಂಗಮದ ಸಂಗಮನಾಥ: ವೈಜನಾಥ ಹಿರೇಮಠ

ಸಹಾಯವಾಣಿ ಸುದ್ದಿ



ಯಾದಗಿರಿ: ಬಸವಣ್ಣನವರು ಅನೇಕ ಕ್ರಾಂತಿಕಾರಕ ಹೆಜ್ಜೆಗಳನ್ನು ಇರಿಸಿದ ಪ್ರಯುಕ್ತ ಕಲ್ಯಾಣದಲ್ಲಿ 12ನೇ ಶತಮಾನದಲ್ಲಿ ವಚನಗಳ ಕ್ರಾಂತಿಯಾಯಿತು, ಅಂದೇ ಸರ್ವೋತ್ತಮ ಸಮಾಜದ ಸಂಸತ್ತು ಅನುಭವ ಮಂಟಪ ರಚನೆ ಮಾಡಿದ ಕ್ರಾಂತಿಯಾಯಿತು. ಕೊನೆಗೆ ಮಾನವರೆಲ್ಲ ಒಂದೇ ಎಂಬ ಸಂದೇಶ ಸಾರುವ ಕಲ್ಯಾಣ ಕ್ರಾಂತಿಯಾಯಿತು ಎಂದು ಯಾದಗಿರಿ ಟೈಮ್ಸ್ ಸಂಪಾದಕ ವೈಜನಾಥ ಹಿರೇಮಠ ಅಭಿಪ್ರಾಯಪಟ್ಟರು.

ಅವರು ಇಲ್ಲಿಗೆ ಸಮೀಪದ ನೆರೆಯ ತೆಲಂಗಾಣ ರಾಜ್ಯದ ನಾರಾಯಣಪೇಟೆ ಜಿಲ್ಲೆಯ ಮಖ್ತಲ್ ತಾಲ್ಲೂಕಿನ ಮಾಗನೂರು ಮಂಡಲದ ವ್ಯಾಪ್ತಿಗೆ ಬರುವ ಉಜ್ಜೇಲಿ ಗ್ರಾಮದ ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನ ದಲ್ಲಿ ಗ್ರಾಮಸ್ಥರು ಆಯೋಜಿಸಿದ್ದ ಬಸವ ಜಯಂತಿ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಮಾತನಾಡಿದರು.

ಸತ್ಯ, ನ್ಯಾಯ, ಧರ್ಮ ಮಾರ್ಗದಲ್ಲಿ ಕಾಯಕ ಮಾಡಬೇಕು ಅಂದಾಗ ಮಾತ್ರ ಅಂತಹ ಕಾಯಕವೇ ಕೈಲಾಸವಾಗಿದೆ ಎಂದು ಹೇಳಿದ್ದಾರೆ ಎಂದು ತಿಳಿಸಿದರು.

ಕನ್ನಡ ನಾಡಿನ ಏಕೈಕ ಮೇರು ಸಾದೃಶ್ಯ ವ್ಯಕ್ತಿಯಾಗಿರುವ ಬಸವಣ್ಣನವರು ಸಾಮಾಜಿಕ, ಆರ್ಥಿಕ, ಧಾರ್ಮಿಕ, ಶೈಕ್ಷಣಿಕ, ಮಹಿಳಾ ಸಮಾನತೆ ಮತ್ತು ಧಾರ್ಮಿಕ- ಸಾಮಾಜಿಕ ಚಿಂತನೆಯ ಸಂಸತ್ತು (ಅನುಭವ ಮಂಟಪ) ಸ್ಥಾಪನೆ ಸೇರಿದಂತೆ ಇಂತಹ ಸಾಧನೆ ಮಾಡಿದ ವಿಶ್ವದ ಏಕೈಕ ವ್ಯಕ್ತಿಯಾಗಿದ್ದಾರೆ ಇಂಥವರ ಹೆಸರನ್ನು ಅಂತಾರಾಷ್ಟ್ರೀಯ ಮಟ್ಟದಲ್ಲಿ ಇಡಬೇಕಾಗಿತ್ತು. ಆದರೆ ದುರದೃಷ್ಟವಶಾತ್ ಇವರ ಹೆಸರನ್ನು ಒಂದು ವಿವಿಗೆ ಇಡಲು ಬಿಡದಂತಹ ಕ್ಷುಲ್ಲಕ ಜನತೆ ನಮ್ಮ ರಾಜ್ಯದಲ್ಲಿಯೇ ಇರುವುದು ನೋವಿನ ಸಂಗತಿ ಎಂದರು.

ಬಸವಣ್ಣನವರು ಬಾಲ್ಯದಲ್ಲಿ ಶಿಕ್ಷಣ ಪಡೆದಿದ್ದು ಬಾಗಲಕೋಟೆ ಜಿಲ್ಲೆಯ ಹುನಗುಂದ ತಾಲ್ಲೂಕಿನ ಕೂಡಲ ಸಂಗಮ ಅಲ್ಲ ಬದಲಿಗೆ ಯಾದಗಿರಿ ಜಿಲ್ಲೆ ವಡಗೇರಿ ತಾಲ್ಲೂಕಿನ ಸಂಗಮದಲ್ಲಿ ಎಂಬ ಸಂಗತಿ ಇತ್ತಿಚೆಗಷ್ಟೇ ಬೆಳಕಿಗೆ ಬಂದಿದ್ದು, ಇದನ್ನು ಸ್ವತಃ ನಡೆದಾಡುವ ದೇವರು ಎಂದೇ ಖ್ಯಾತರಾಗಿದ್ದ ತುಮಕೂರಿನ ಶ್ರೀ ಸಿದ್ದಗಂಗಾ ಶಿವಕುಮಾರ ಶ್ರೀಗಳು ತಾಮ್ರಪಟದಲ್ಲಿ ಬರೆದಿಟ್ಟಿದ್ದಾರೆ ಎಂದು ಇತಿಹಾಸಕಾರರು ಉಲ್ಲೇಖಿಸಿದ್ದನ್ನು ತಿಳಿಸುತ್ತಿರುವೆ ಎಂದು ಅವರು ಹೇಳಿದರು.

ಬಸವಣ್ಣನವರು ಬಾಲ್ಯ, ಶಿಕ್ಷಣ ಪಡೆದ ಸ್ಥಳ ವಡಗೇರಿ ತಾಲ್ಲೂಕಿನ ಕೂಡಲ ಸಂಗಮವೇ ಆಗಿದೆ ಬಾಗಲಕೋಟೆ ಜಿಲ್ಲೆ ಹುನಗುಂದ ತಾಲ್ಲೂಕಿನ ಕೂಡಲ ಸಂಗಮ ಕೇವಲ ಅವರು ಲಿಂಗೈಕ್ಯವಾದ ಸ್ಥಳವಾಗಿದೆ ಆದರೆ ಆ ಸ್ಥಳಕ್ಕೆ ಹೆಚ್ಚು ಪ್ರಚಾರ ಸಿಕ್ಕಿ ಅದನ್ನೇ ಸತ್ಯ ಎಂದು ನಂಬಿದ ಕಾರಣ ನಮ್ಮ ಜಿಲ್ಲೆಯ ಕೂಡಲ ಸಂಗಮಕ್ಕೆ ಪ್ರಾತಿನಿಧ್ಯ ಸಿಗದಂತಾಯಿತು. ಸಂಶೋಧಕರು ಈ ನಿಟ್ಟಿನಲ್ಲಿ ಇನ್ನು ಹೆಚ್ಚಿನ ಶೋಧ ಮಾಡಬೇಕಿದೆ ಎಂದು ನುಡಿದರು.

ಮರಿಕಲ್ ಪಟ್ಟಣದ ನಿವೃತ್ತ ಶಿಕ್ಷಕ ವೆಂಕಟರಾಮುಲು ಮಾತನಾಡಿ ಜಗಜ್ಯೋತಿ ಬಸವಣ್ಣನವರು ಉಪನಯನ ಸಂಸ್ಕಾರದ ಘಟನೆಯಿಂದಲೇ ಕ್ರಾಂತಿಕಾರಕ ನಿಲುವು ಕೈಗೊಂಡು ಮುಂದೆ ಜಗತ್ತಿಗೆ ಮಾದರಿಯಾಗುವಂತಹ ಅನುಭವ ಮಂಟಪವೆಂಬ ಮಾದರಿ ಸಂಸತ್ತು ರಚನೆ ಮಾಡಿದ ಶ್ರೇಷ್ಠ ಚಿಂತಕ ಎಂದು ಅವರು ಹೇಳಿದರು.

ತೆಲುಗಿನ ಖ್ಯಾತ ಕವಿಗಳಾದ ಕಂದುಕುರಿ ವೀರೇಶಲಿಂಗಂ, ಕುರಿಜಾಡ ಅಪ್ಪಾರಾವು, ಸುಂದರೇಶ್, ಹೇಮರಡ್ಡಿ ಮಲ್ಲಮ್ಮನ ಮೈದುನ ಯೋಗಿ ವೇಮನರ ಮೇಲೆ ಬಸವಣ್ಣನವರ ಪ್ರಭಾವವು ಆಗಿದ್ದು ಇವರೆಲ್ಲರ ಸಾಹಿತ್ಯದಲ್ಲಿಯೂ ಬಸವಣ್ಣನವರ ವಚನಗಳು ಢಾಳಾಗಿ ಪ್ರತಿಬಿಂಬಿಸಿವೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಅತಿಥಿಗಳಾಗಿ ಮಾಜಿ ಮಂಡಲ ಪಂಚಾಯಿತಿ ಅಧ್ಯಕ್ಷ ಶ್ರೀನಿವಾಸರೆಡ್ಡಿ, ಗ್ರಾಮದ ಮುಖಂಡರಾದ ಚಂದ್ರಾರೆಡ್ಡಿ, ಉಪ ಸರ್ಪಂಚ್ ಎಂ ರಾಜು, ಗ್ರಾಮಸ್ಥರಾದ ಯಂಕಪ್ಪ, ಗ್ರಾಮ ಕಾಂಗ್ರೆಸ್ ಅಧ್ಯಕ್ಷ ಮೋನಪ್ಪ, ಮಲ್ಲೇಶ್, ಗುಡಿ ಅರ್ಚಕ ಅನಿಲ್ ಕುಮಾರ್ ಶರ್ಮಾ ಇನ್ನಿತರರು ಇದ್ದರು.

## ರಾಜಕೀಯಕ್ಕೆ ಜೈ ಶ್ರೀರಾಮ್ ಬೇಡ: ಹರೀಶ್ ಗೌಡ

ಸಹಾಯವಾಣಿ ಸುದ್ದಿ



ಮೈಸೂರು: ಜೈ ಶ್ರೀರಾಮ ಎನ್ನುವುದು ಪೂರ್ವಜರ ಕಾಲದಿಂದಲ್ಲೂ ಹೇಳಲಾಗುತ್ತಿದೆ. ಇದನ್ನು ರಾಜಕೀಯವಾಗಿ ಹಾಗೂ ಬೇರೆ ಬೇರೆ ರೀತಿ ಬಳಸಲಾಗುತ್ತಿದೆ. ಈ ರೀತಿ ಆಗಬಾರದು. ಶ್ರೀರಾಮ ಎಲ್ಲರಿಗೂ ಒಂದೇ ಎಂದು ಕಾಂಗ್ರೆಸ್ ಶಾಸಕ ಕೆ. ಹರೀಶ್ ಗೌಡ ಹೇಳಿದರು.

ಕೆಆರ್‌ಎಸ್ ರಸ್ತೆ ರೈಲ್ವೆ ಮೈದಾನ ಎದುರಿನ ಆಂಜನೇಯಸ್ವಾಮಿ ದೇವಸ್ಥಾನ ಸಮೀಪ ಇರುವ ನವೀಕೃತಗೊಂಡಿರುವ ಸತ್ಯಪ್ರಮೋದ ಕಲ್ಯಾಣ ಮಂಟಪದ ಉದ್ಘಾಟನಾ ಸಮಾರಂಭದಲ್ಲಿ ಮಾತ ನಾಡಿದರು.

ಯಾವುದೇ ಗ್ರಾಮಕ್ಕೂ ಹೋದರೂ ಶ್ರೀರಾಮಮಂದಿರ ಇರಲಿದೆ. ಕೆ.ಜಿ. ಕೊಪ್ಪಲಿನಲ್ಲಿ ನಮ್ಮ ಪೂರ್ವಿಕರು ರಾಮ ಮಂದಿರ ಕಟ್ಟಿಸಿದ್ದಾರೆ. ಶ್ರೀರಾಮನನ್ನು ಸೂರ್ಯ ಚಂದ್ರ ಇರುವರೆಗೂ ನೆನಸಿ ಕೊಳ್ಳುತ್ತೇವೆ. ದೇವರ ಮೇಲೆ ಅಪಾರ ಭಕ್ತಿ ತಮಗೂ ಇದೆ ಎಂದರು.

ನಾವು ಚಿಕ್ಕ ವಯಸ್ಸಿನಿಂದ ರಾಮ, ಕೃಷ್ಣ, ಶಿವ ದೇವರು ಸೇರಿದಂತೆ ನಾನಾ ದೇವರ ಬಗ್ಗೆ ಹೇಳಿದ್ದೇವೆ. ಅಲ್ಲದೇ, ಮಕ್ಕಳಿಗೂ ಹೇಳಿ ಬೆಳೆಸುತ್ತಿವೆ. ಭರತಖಂಡದ ಸಂಸ್ಕಾರದಲ್ಲಿ ದೇವರನ್ನು ನಂಬುತ್ತಾರೆ.

ಆಧ್ಯಾತ್ಮಿಕ ತಮಗೆ ಕೂಡ ಇದೆ. ಭಗವಂತ ಇಲ್ಲದೇ ನಾವು ಯಾರು ಇಲ್ಲ ಎಂದರು.

ಉತ್ತರಾದಿ ಮಠವು ಲೋಕ ಕಲ್ಯಾಣಕ್ಕಾಗಿ ಯಾವುದೇ ಕೆಲಸ ಮಾಡಿದರೆ, ತಾವು ಕೂಡ ಸಹಕಾರ ನೀಡುವುದಾಗಿ ಭರವಸೆ ನೀಡಿದರು.

ಕಲ್ಯಾಣ ಮಂಟಪವನ್ನು ಸತ್ಯಾಧ್ಯಾ ನಾಚಾರ್ಯ ಕಟ್ಟಿ ಉದ್ಘಾಟಿಸಿದರು. ಉತ್ತರಾದಿ ಮಠದ ವಿದ್ಯಾಧೀಶಾಚಾರ್ಯ ಗುತ್ತಲ್, ಆದ್ಯ ಗೋವಿಂದಾಚಾರ್ಯ, ಉತ್ತರಾದಿ ಮಠದ ದಿವಾನ ಶಶಿಧರಾಚಾರ್ಯ, ಆಡಳಿತಾಧಿಕಾರಿ ಆನಂದತೀರ್ಥಾಚಾರ್ಯ ಚಿಮ್ಮಲಗಿ, ಆಡಳಿತಾಧಿಕಾರಿ ಪಂಡುರಂಗಾಚಾರ್ಯ ರೊಟ್ಟಿ, ಎಂಡಿಎ ಮಾಜಿ ಅಧ್ಯಕ್ಷ ಎಚ್.ವಿ. ರಾಜೀವ್, ಎನ್.ಎಂ. ನವೀನ್ ಕುಮಾರ್, ಮಾಜಿನಗರ ಪಾಲಿಕಾ ಸದಸ್ಯರಾದ ಪ್ರಮೀಳಾ ಭರತ್, ಜಗನ್ನಾಥ ಶೆಣೈ, ಮಹೇಶ್ ಕಾಮತ್, ವಾಸುದೇವಮೂರ್ತಿ, ವಿಕ್ರಂ ಅಯ್ಯಂಗಾರ್, ಪ್ರಮೋದಾಚಾರ್ಯ, ಅಜಯ್ ಶಾಸ್ತ್ರಿ ಮತ್ತಿತರರು ಇದ್ದರು.

## ಸಮ ಸಮಾಜಕ್ಕೆ ಅಡಿಗಲ್ಲು ಹಾಕಿದ್ದು ಬಸವಣ್ಣ

ಸಹಾಯವಾಣಿ ಸುದ್ದಿ



ಮೈಸೂರು: ಸಮಾಜದಲ್ಲಿ ಇದ್ದ ಎಲ್ಲಾ ರೀತಿಯ ಅಸಮಾನತೆ, ಅಸಮತೋಲನ, ತಾರತಮ್ಯ ಇವುಗಳ ವಿರುದ್ಧ ಬಂಡೆದ್ದು ಸಮ ಸಮಾಜದ ನಿರ್ಮಾಣಕ್ಕೆ ಅಡಿಗಲ್ಲು ಹಾಕಿದ ಹರಿಕಾರ ಬಸವಣ್ಣ ಎಂದು ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು ರಾಸಾಯನ ಶಾಸ್ತ್ರದ ಪ್ರಾಧ್ಯಾಪಕ ಡಾ.ತಿಪ್ಪೇಸ್ವಾಮಿ ಅಭಿಪ್ರಾಯಪಟ್ಟರು.

ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು ಸಾಂಸ್ಕೃತಿಕ ಸಮಿತಿ ವತಿಯಿಂದ ಏರ್ಪಡಿಸಿದ್ದ ಬಸವಣ್ಣನ ಜಯಂತಿ ಆಚರಣೆ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಸಮಾಜದಲ್ಲಿದ್ದ ಲಿಂಗಭೇದ, ಜಾತೀಯತೆ ಹಾಗೂ ಇನ್ನಿತರ ತಾರತಮ್ಯಗಳ ವಿರುದ್ಧ ಸಮರಸಾರಿದ ನಿಜವಾದ ನಾಯಕ ಬಸವಣ್ಣ. ಸಮಾಜದಲ್ಲಿ ಸಮಾನತೆ ಇರಬೇಕು. ಅಂತಹ ಸಮಾಜದ ಕನಸನ್ನು ಕಂಡು ಅದನ್ನು ನಿಜವಾಗಿಸುವ ನಿಟನಲ್ಲಿ ಕೆಲಸ ಮಾಡಿದ ಮೂಲಪುರುಷ ಬಸವಣ್ಣ. ಜತೆಗೆ ಜಡತ್ವ ನೀಗುವ ಸಮಾಜ ಆಗಬೇಕಾದರೆ ಕಾಯಕಕ್ಕೆ ಮಹತ್ವ ನೀಡಬೇಕು ಎಂದರು.

ಬಸವಣ್ಣ ಕಾಯಕ ಮಾಡುವ ಸಮಾಜ ನಿರ್ಮಾಣಕ್ಕೆ ವೇದಿಕೆ ಹಾಕಿಕೊಟ್ಟರು. ಲಿಂಗ ತಾರತಮ್ಯ ಎಂಬುದು ಸಮಾಜದ ಜಾಡ್ಯ. ಹಾಗಾಗಿ ಲಿಂಗಭೇದವಿಲ್ಲದ ಸಮಾಜದ ನಿರ್ಮಾಣಕ್ಕೆ ಅವರು ನಾಂದಿ ಹಾಡಿದರು. ಲಿಂಗ ತಾರತಮ್ಯ ಇರಬಾರದು, ಸ್ತ್ರೀ ಸಮಾನತೆ ಸಮಾನತೆ ಇರಬೇಕು. ಪುರುಷರಿಗೆ ಸಮಾನವಾಗಿ ಮಹಿಳೆ ಹಕ್ಕು ಇರಬೇಕು ಎಂದು ಪ್ರತಿಪಾದಿಸಿದ್ದು. ಇಂದು ಬಸವಣ್ಣನವರ ನೀತಿಯ ವಿರುದ್ಧ ಸಂಪ್ರದಾಯವಾದಿಗಳು ನಡೆದುಕೊಳ್ಳುತ್ತಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದರು.

ಆಗ ಅನುಭವ ಮಂಟಪ. ಅಂದರೆ ಈಗಿನ ಪ್ರಜಾಪ್ರಭುತ್ವ ವ್ಯವಸ್ಥೆ. ಇಂತಹ ವ್ಯವಸ್ಥೆ ರೂಪಿಸಿ ಎಲ್ಲಾ ವರ್ಗ, ಲಿಂಗದವರಿಗೆ ಪ್ರಾತಿನಿಧ್ಯ ನೀಡಿದರು. ಇದು 12ನೇ ಶತಮಾನದಲ್ಲಿನ ದಿಟ್ಟ ಕ್ರಾಂತಿಕಾರಕ ಹೆಜ್ಜೆ ಎಂದು ಬಣ್ಣಿಸಿದರು.

ಕಾಯಕ, ದಾಸೋಹ ಮತ್ತು ಸಮಾನತೆ ತತ್ವ ಆಚರಿಸುವ ಎಲ್ಲರೂ ಶರಣರು ಎಂದ ಅವರು, ಅಂತರ್ಜಾತಿ ವಿವಾಹಕ್ಕೆ ವೇದಿಕೆ ಮಾಡಿಕೊಟ್ಟು ಲಾವಣ್ಯ ಮತ್ತು ಶೀಲವಂತರ ವಿವಾಹ ನೆರವೇರಿಸಿದರು. ಇದು ಸಾಮಾಜಿಕ ಬದಲಾವಣೆಗೆ ಮೊದಲ ಪ್ರಯತ್ನ ಎಂದರು.

ಬಸವಣ್ಣ ಅವರ ತತ್ವ ಆದರ್ಶ ಪಾಲನೆ ಅವರಿಗೆ ಸಲ್ಲಿಸುವ ಗೌರವ. ಅವರು ಒಂದು ಜಾತಿಗೆ ಸೀಮಿತ ಅಲ್ಲ ಎಂದರು.

ವಿದ್ಯಾರ್ಥಿನಿ ಮೇಘ ಹಡಪದ ಬಸವಣ್ಣನವರ ತತ್ವ ಮತ್ತು ಆದರ್ಶಗಳ ಕುರಿತು ಮಾತನಾಡಿ, ಇಂದಿನ ಸಮಾಜದಲ್ಲಿ ಬಸವಣ್ಣನವರ ತತ್ವಗಳನ್ನು ಅಳವಡಿಸಿಕೊಳ್ಳದಿದ್ದರೆ ಹೇಗೆ ಸಮಾಜ ಹಾದಿ ತಪ್ಪಿ ಅರಾಜಕತೆ ಉಂಟುಮಾಡುತ್ತದೆ ಎಂಬುದನ್ನು ವಿವರವಾಗಿ ಹೇಳಿದರು.

ಕಾರ್ಯಕ್ರಮದಲ್ಲಿ ಅಧ್ಯಾಪಕ ಡಾ.ರೆಹಮದ್ ಉಲ್ಲಾ, ಪ್ರಭಾರ ಪ್ರಾಂಶು ಪಾಲ ಡಾ.ವಾಸುದೇವ ಶೆಟ್ಟಿ, ಸಾಂಸ್ಕೃತಿಕ ಸಮಿತಿ ಖಜಾಂಚಿ ಬೃಂದಾ.ಎನ್, ಸಂಚಾಲಕ ಗೋವಿಂದರಾಜು, ವಿದ್ಯಾರ್ಥಿ ಸಂಘದ ಅಧ್ಯಕ್ಷೆ ಬೃಂದಾ.ಎ ಸೇರಿದಂತೆ ಹಲವರು ಇದ್ದರು.

## ಉಡುತೊರೆ ಜಲಾಶಯದ ಹಿನ್ನೀರಿನ ಕೆಸರಿನಲ್ಲಿ ಸಿಲುಕಿದ್ದ ಮೂರು ಆನೆಗಳ ರಕ್ಷಣೆ

ಸಹಾಯವಾಣಿ ಸುದ್ದಿ



ಹನೂರು: ತಾಲೂಕಿನ ಮಲೆ ಮಹದೇಶ್ವರ ವನ್ಯಜೀವಿ ವಲಯದ ಉಡುತೊರೆ ಹಳ್ಳ ಜಲಾಶಯದ ಹಿನ್ನೀರಿನ ಕೆಸರಿನಲ್ಲಿ ಹೂತುಕೊಂಡ ಮೂರು ಆನೆಗಳನ್ನು ಅರಣ್ಯ ಇಲಾಖೆಯ ಅಧಿಕಾರಿ ಸಿಬ್ಬಂದಿಗಳು ಕಾರ್ಯಾಚರಣೆ ಮೂಲಕ ರಕ್ಷಣೆ ಮಾಡಿದ್ದಾರೆ. ಇದರಲ್ಲಿ ಅಸ್ವಸ್ಥಗೊಂಡ ಒಂದು ಆನೆಗೆ ಸ್ಥಳದಲ್ಲಿ ಚಿಕಿತ್ಸೆ ನೀಡಿ ಹಾರೈಕೆ ಮಾಡಲಾಗುತ್ತಿದೆ.

ಮಲೆ ಮಹದೇಶ್ವರ ವನ್ಯಜೀವಿ ಧಾಮ ಹನೂರು ಬಫರ್ ವಲಯಕ್ಕೆ ಸೇರಿದ ಉಡುತೊರೆ ಹಳ್ಳ ಜಲಾಶಯದ ಹಿನ್ನೀರಿನ ಭಾಗದಲ್ಲಿ ನೀರು ಕುಡಿಯಲು ನಾಲ್ಕು ಆನೆಗಳು ಬಂದಿದೆ. ಈವೇಳೆ ಮೂರು ಆನೆಗಳು ಕೆಸರಿನಲ್ಲಿ ಸಿಲುಕಿ ಹೂತುಕೊಂಡಿವೆ. ಇದರಲ್ಲಿ ಒಂದು ಆನೆಯು ಹೇಗೋ ನೀರು ಕುಡಿದುಕೊಂಡು ಅರಣ್ಯದೊಳಗೆ ಹೊರಟುಹೋಗಿದೆ.

ಶನಿವಾರ ಸಂಜೆ ಅಥವಾ ರಾತ್ರಿ ವೇಳೆಯಲ್ಲಿ ನೀರು ಕುಡಿಯಲು ಬಂದ ಆನೆಗಳು ಕೆಸರಿನಲ್ಲಿ ಹೂತು ಕೊಂಡು ಹೊರಬರಲು ಸಾಧ್ಯವಾಗದೆ ಸಾವು ಬದುಕಿನ ಜತೆ ಹೋರಾಡುತ್ತಾ ಗಿಳಾಡುತ್ತಿದ್ದವು ಎನ್ನಲಾಗಿದೆ. ಅದನ್ನು ಅರಣ್ಯ ಇಲಾಖೆಯ ಗಸ್ತು ಸಿಬ್ಬಂದಿ ಭಾನುವಾರ ಮಧ್ಯಾಹ್ನ ಗಮನಿಸಿ, ಹಿರಿಯ ಅಧಿಕಾರಿಗಳಿಗೆ ಮಾಹಿತಿ ನೀಡಿದ್ದಾರೆ

ಕೂಡಲೇ ಸ್ಥಳಕ್ಕೆ ಧಾಮಿಸಿದ ಮಲೆ ಮಹದೇಶ್ವರ ವನ್ಯಜೀವಿ ಧಾಮದ ಡಿ.ಸಿ.ಎಫ್ ಭಾಸ್ಕರ್, ಎ.ಸಿ.ಎಫ್ ವಿರಾಜ್ ಹೊಸೂರ್, ವಲಯ ಅರಣ್ಯಾಧಿಕಾರಿ ಜಿತೇಂದ್ರ, ವೈದ್ಯಾಧಿಕಾರಿಗಳು, ಅಗ್ನಿಶಾಮಕ ಠಾಣಾಧಿಕಾರಿ ಮಹೇಶ್ ಹಾಗೂ ಸಿಬ್ಬಂದಿ, ಆನೆಗಳ ರಕ್ಷಣೆಗೆ ಮುಂದಾದರು.

# ಹಣದಿಂದ ಖರೀದಿಸಬಹುದಾದ ವಸ್ತುಗಳಿಗೆ ಹಣವನ್ನು ಖರ್ಚು ಮಾಡಿ, ಹಣದಿಂದ ಖರೀದಿಸಲಾಗದ ವಸ್ತುಗಳಿಗೆ ಸಮಯವನ್ನು ಖರ್ಚು ಮಾಡಿ

**ಸಹಾಯವಾಣಿ ಸುದ್ದಿ**

ಮಾನವನ ಜೀವನದಲ್ಲಿ ಹಣ ಮತ್ತು ಸಮಯ ಎರಡೂ ಅಮೂಲ್ಯ ಸಂಪನ್ಮೂಲಗಳು. ಆದರೆ ಅವುಗಳ ಮೌಲ್ಯ ಮತ್ತು ಬಳಕೆ ವಿಭಿನ್ನವಾಗಿವೆ. ಹಣವನ್ನು ನಾವು ಗಳಿಸಬಹುದು, ಕಳೆದುಕೊಂಡರೂ ಮತ್ತೆ ಸಂಪಾದಿಸಬಹುದು. ಆದರೆ ಸಮಯವನ್ನು ಒಮ್ಮೆ ಕಳೆದುಕೊಂಡರೆ, ಅದನ್ನು ಮರಳಿ ಪಡೆಯಲು ಸಾಧ್ಯವಿಲ್ಲ. ಈ ಹಿನ್ನೆಲೆಯಲ್ಲೇ "ಹಣದಿಂದ ಖರೀದಿಸಬಹುದಾದ ವಸ್ತುಗಳಿಗೆ ಹಣವನ್ನು ಖರ್ಚು ಮಾಡಿ, ಹಣದಿಂದ ಖರೀದಿಸಲಾಗದ ವಸ್ತುಗಳಿಗೆ ಸಮಯವನ್ನು ಖರ್ಚು ಮಾಡಿ" ಎಂಬ ಹೇಳಿಕೆ ಬಹಳ ಗಾಢವಾದ ಜೀವನ ಸತ್ಯವನ್ನು ಸೂಚಿಸುತ್ತದೆ.

ಈ ಹೇಳಿಕೆಯ ಅರ್ಥವನ್ನು ನಾವು ಸರಳವಾಗಿ ಅರ್ಥಮಾಡಿಕೊಳ್ಳಬಹುದು: ಭೌತಿಕ ವಸ್ತುಗಳು-ಹಾಗೆಂದರೆ ಮನೆ, ಕಾರು, ಬಟ್ಟೆ, ಸಾಧನಗಳು-ಹಣದಿಂದ ಸಿಗುತ್ತವೆ. ಆದರೆ ಪ್ರೀತಿ, ಸ್ನೇಹ, ಆರೋಗ್ಯ, ಸಂತೋಷ, ನಂಬಿಕೆ, ಅನುಭವಗಳು ಇವುಗಳನ್ನು ಹಣದಿಂದ ಖರೀದಿಸಲು ಸಾಧ್ಯವಿಲ್ಲ. ಅವುಗಳಿಗೆ ಸಮಯ, ಕಾಳಜಿ ಮತ್ತು ಸಮರ್ಪಣೆ ಬೇಕಾಗುತ್ತದೆ.

**ಹಣದಿಂದ ಖರೀದಿಸಬಹುದಾದ ವಸ್ತುಗಳು:** ನಾವು ದಿನನಿತ್ಯ ಬಳಸುವ ಬಹುತೇಕ ವಸ್ತುಗಳನ್ನು ಹಣದಿಂದ ಪಡೆಯಬಹುದು. ಉದಾಹರಣೆಗೆ, ನಾವು ಒಂದು ಉತ್ತಮ ಮೊಬೈಲ್ ಫೋನ್ ಖರೀದಿಸಬಹುದು, ಅಥವಾ ಸೌಕರ್ಯಯುತ ಮನೆ ನಿರ್ಮಿಸಬಹುದು. ಈ ವಸ್ತುಗಳು ನಮ್ಮ ಜೀವನವನ್ನು ಸುಲಭಗೊಳಿಸುತ್ತವೆ. ಆದ್ದರಿಂದ, ಅವುಗಳನ್ನು ಪಡೆಯಲು ಹಣವನ್ನು ಖರ್ಚು ಮಾಡುವುದು ತಪ್ಪಲ್ಲ.

ಆದರೆ ಸಮಸ್ಯೆ ಎಲ್ಲಿ ಉಂಟಾಗುತ್ತದೆ ಎಂದರೆ- ನಾವು ಈ ವಸ್ತುಗಳ ಹಿಂದೆ ನಮ್ಮ ಸಂಪೂರ್ಣ ಸಮಯ ಮತ್ತು ಜೀವನವನ್ನು ಹೂಡಲು ಪ್ರಾರಂಭಿಸಿದಾಗ. ಹಣ ಸಂಪಾದನೆಗೆ ನಾವು ಅತಿಯಾಗಿ ಒತ್ತು ನೀಡಿದಾಗ, ಜೀವನದ ಇತರ ಪ್ರಮುಖ ಅಂಶಗಳನ್ನು ನಾವು ಕಡೆಗಣಿಸುತ್ತೇವೆ.

**ಹಣದಿಂದ ಖರೀದಿಸಲಾಗದ ವಸ್ತುಗಳು:**

**ಹಣದಿಂದ ಖರೀದಿಸಲಾಗದ ಕೆಲವು ಅಮೂಲ್ಯ ಸಂಗತಿಗಳಿವೆ:**

- ***ಪ್ರೀತಿ ಮತ್ತು ಸಂಬಂಧಗಳು**
- ***ಆರೋಗ್ಯ**
- ***ಸಂತೋಷ**
- ***ಮನಶಾಂತಿ**
- ***ನಂಬಿಕೆ ಮತ್ತು ಗೌರವ**

ಈ ಎಲ್ಲವನ್ನು ಪಡೆಯಲು ಹಣವಲ್ಲ, ಸಮಯ ಮತ್ತು ನಿಷ್ಠೆ ಬೇಕಾಗುತ್ತದೆ. ಉದಾಹರಣೆಗೆ, ನೀವು ನಿಮ್ಮ ಕುಟುಂಬದ ಜೊತೆ ಸಮಯ ಕಳೆಯದೇ ಇದ್ದರೆ, ಹಣ ಕೊಟ್ಟರೆ ಮಾತ್ರ ಪ್ರೀತಿ ದೊರೆಯುವುದಿಲ್ಲ.

**ಒಂದು ಉದಾಹರಣೆ :**

ರಾಮು ಎಂಬ ವ್ಯಕ್ತಿ ಒಂದು ದೊಡ್ಡ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ. ಅವನು ತಿಂಗಳಿಗೆ ಬಹಳಷ್ಟು ಹಣ ಸಂಪಾದಿಸುತ್ತಿದ್ದ. ತನ್ನ ಕುಟುಂಬಕ್ಕೆ ಉತ್ತಮ ಮನೆ, ಕಾರು, ಎಲ್ಲ ಸೌಕರ್ಯಗಳನ್ನು ಒದಗಿಸಿದ್ದ. ಆದರೆ ಅವನು ಸದಾ ಕೆಲಸದಲ್ಲಿ ತೊಡಗಿಕೊಂಡಿದ್ದರಿಂದ, ತನ್ನ ಮಕ್ಕಳ ಜೊತೆ ಅಥವಾ ಹೆಂಡತಿಯ ಜೊತೆ ಸಮಯ ಕಳೆಯಲು ಸಾಧ್ಯವಾಗುತ್ತಿರಲಿಲ್ಲ.

ಅವನ ಮಗನಿಗೆ ಶಾಲೆಯಲ್ಲಿ ಬಹುಮಾನ ಸಿಕ್ಕಾಗಲೂ, ರಾಮು ಕೆಲಸದ ಕಾರಣದಿಂದ ಹಾಜರಾಗಲಿಲ್ಲ. ಹೆಂಡತಿಗೆ ಆರೋಗ್ಯ ಸಮಸ್ಯೆ ಬಂದಾಗಲೂ, ಅವನು ಕೇವಲ ಹಣ ನೀಡಿ ಚಿಕಿತ್ಸೆ ಮಾಡಿಸಿದ್ದ. ಆದರೆ ಮಾನಸಿಕ ಬೆಂಬಲ ನೀಡಲು ಸಮಯ ಕೊಡಲಿಲ್ಲ.

ಕೆಲ ವರ್ಷಗಳ ನಂತರ, ರಾಮು ಗಮನಿಸಿದಾಗ ಅವನ ಕುಟುಂಬದ ಸದಸ್ಯರೊಂದಿಗೆ ಅವನ ಸಂಬಂಧ ದುರ್ಬಲವಾಗಿತ್ತು. ಮಕ್ಕಳು ಅವನೊಂದಿಗೆ ಹತ್ತಿರವಾಗಿರಲಿಲ್ಲ, ಹೆಂಡತಿಗೂ ಒಂಟಿ-ತನ ಅನುಭವವಾಗುತ್ತಿತ್ತು. ಆಗ ಅವನಿಗೆ ಅರಿವಾಯಿತು. ಹಣದಿಂದ ಮನೆ ಕಟ್ಟಬಹುದು, ಆದರೆ ಕುಟುಂಬದ ಬಾಂಧವ್ಯವನ್ನು ಕಟ್ಟಲು ಸಮಯವೇ ಮುಖ್ಯ.

ಈ ಸಂದರ್ಭದಲ್ಲಿ, ರಾಮು ತನ್ನ ಜೀವನದ ಆದ್ಯತೆಗಳನ್ನು ಬದಲಾಯಿಸಲು ಪ್ರಾರಂಭಿಸಿದ. ಕೆಲಸದ ಜೊತೆಗೆ ಕುಟುಂಬಕ್ಕೆ ಸಮಯ ನೀಡಲು ಆರಂಭಿಸಿದ. ಮಕ್ಕಳೊಂದಿಗೆ ಮಾತನಾಡಲು, ಅವರೊಂದಿಗೆ ಆಟವಾಡಲು, ಹೆಂಡತಿಯೊಂದಿಗೆ ಸಮಯ ಕಳೆಯಲು ಪ್ರಾರಂಭಿಸಿದ. ನಿಧಾನವಾಗಿ ಅವರ ನಡುವಿನ ಸಂಬಂಧಗಳು ಪುನಃ ಗಟ್ಟಿಯಾದವು.

ಈ ಉದಾಹರಣೆ ನಮಗೆ ಸ್ಪಷ್ಟಪಡಿಸುತ್ತದೆ: ಹಣವು ಜೀವನದ ಒಂದು ಭಾಗ ಮಾತ್ರ; ಆದರೆ ಸಮಯವೇ ಜೀವನದ ಗುಣಮಟ್ಟವನ್ನು ನಿರ್ಧರಿಸುತ್ತದೆ.

**ಸಮಯದ ಮೌಲ್ಯ:** ಸಮಯವು ಅತ್ಯಂತ ಅಮೂಲ್ಯ ಸಂಪತ್ತು. ಪ್ರತಿಯೊಬ್ಬರಿಗೂ ದಿನಕ್ಕೆ 24 ಗಂಟೆಗಳು ಮಾತ್ರ. ಶ್ರೀಮಂತನಾಗಲಿ, ಬಡವನಾಗಲಿ-ಸಮಯದಲ್ಲಿ ವ್ಯತ್ಯಾಸವಿಲ್ಲ. ಆದರೆ ವ್ಯತ್ಯಾಸ ಉಂಟಾಗುವುದು ಅದರ ಬಳಕೆಯಲ್ಲಿ.

ನಾವು ಸಮಯವನ್ನು ಹೇಗೆ ಬಳಸುತ್ತೇವೆ ಎಂಬುದೇ ನಮ್ಮ ಜೀವನವನ್ನು ರೂಪಿಸುತ್ತದೆ. ನಾವು ನಮ್ಮ ಸಮಯವನ್ನು ಸಂಪೂರ್ಣವಾಗಿ ಹಣ ಸಂಪಾದನೆಗೆ ಮಾತ್ರ ಬಳಸಿದರೆ, ಜೀವನದ ಇತರ ಅಂಶಗಳನ್ನು ಕಳೆದುಕೊಳ್ಳುತ್ತೇವೆ.

**ಸಮತೋಲನದ ಅಗತ್ಯತೆ:**

ಜೀವನದಲ್ಲಿ ಹಣ ಮತ್ತು ಸಮಯದ ನಡುವೆ ಸಮತೋಲನ ಅಗತ್ಯ. ಹಣವನ್ನು ಸಂಪಾದಿಸುವುದು ಮುಖ್ಯ, ಆದರೆ ಅದು ಜೀವನದ ಏಕೈಕ ಗುರಿಯಾಗಬಾರದು.

- **ಕೆಲಸಕ್ಕೆ ಸಮಯ ಕೊಡಿ, ಆದರೆ ಕುಟುಂಬಕ್ಕೂ ಸಮಯ ಕೊಡಿ**
- **ಹಣ ಸಂಪಾದಿಸಿ, ಆದರೆ ಆರೋಗ್ಯವನ್ನು ಕಾಪಾಡಿ**
- **ಸೌಕರ್ಯಗಳನ್ನು ಪಡೆದುಕೊಳ್ಳಿ, ಆದರೆ ಸಂತೋಷವನ್ನು ಮರೆಯಬೇಡಿ**

**ಆಧುನಿಕ ಜೀವನದಲ್ಲಿ ಈ ಹೇಳಿಕೆಯ ಮಹತ್ವ:** ಇಂದಿನ ವೇಗದ ಜೀವನದಲ್ಲಿ, ಜನರು ಹೆಚ್ಚು ಹೆಚ್ಚು ಹಣ ಸಂಪಾದನೆಗೆ ಒತ್ತು ನೀಡುತ್ತಿದ್ದಾರೆ. ಆದರೆ ಇದರ ಪರಿಣಾಮವಾಗಿ ಒತ್ತಡ, ಮಾನಸಿಕ ಸಮಸ್ಯೆಗಳು, ಸಂಬಂಧಗಳ ಹಿನ್ನಡೆ ಹೆಚ್ಚುತ್ತಿದೆ.

ಸಾಮಾಜಿಕ ಮಾಧ್ಯಮಗಳು ಮತ್ತು ಸ್ಪರ್ಧಾತ್ಮಕ ಜೀವನ ಶೈಲಿ, ನಮ್ಮನ್ನು ಇನ್ನಷ್ಟು ಭೌತಿಕತೆಯ ಕಡೆಗೆ ತಳ್ಳುತ್ತಿವೆ. ಈ ಸಂದರ್ಭದಲ್ಲಿ, ಈ ಹೇಳಿಕೆ ನಮಗೆ ಒಂದು ದಾರಿದೀಪದಂತೆ ಕೆಲಸ ಮಾಡುತ್ತದೆ.

**ಅನುಸರಿಸಬೇಕಾದ ಕೆಲವು ಸಲಹೆಗಳು:**

- **ದಿನದಲ್ಲಿ ಕನಿಷ್ಠ ಕೆಲವು ಗಂಟೆಗಳಾದರೂ ಕುಟುಂಬಕ್ಕೆ ಮೀಸಲಿಡಿ**
- **ಸ್ನೇಹಿತರೊಂದಿಗೆ ನಿಜವಾದ ಸಂಬಂಧಗಳನ್ನು ಬೆಳೆಸಿಕೊಳ್ಳಿ**
- **ನಿಮ್ಮ ಆರೋಗ್ಯದ ಬಗ್ಗೆ ಕಾಳಜಿ ವಹಿಸಿ**
- **ಹಣ ಸಂಪಾದನೆಗೆ ಮಿತಿಯನ್ನು ಇಡಿ**
- **ಜೀವನದ ಸಣ್ಣ ಸಂತೋಷಗಳನ್ನು ಅನುಭವಿಸಲು ಸಮಯ ತೆಗೆದುಕೊಳ್ಳಿ**

"ಹಣದಿಂದ ಖರೀದಿಸಬಹುದಾದ ವಸ್ತುಗಳಿಗೆ ಹಣವನ್ನು ಖರ್ಚು ಮಾಡಿ, ಹಣದಿಂದ ಖರೀದಿಸಲಾಗದ ವಸ್ತುಗಳಿಗೆ ಸಮಯವನ್ನು ಖರ್ಚು ಮಾಡಿ" ಎಂಬ ಹೇಳಿಕೆ ಜೀವನದ ಸಮತೋಲನದ ಮಹತ್ವವನ್ನು ಸಾರುತ್ತದೆ. ಹಣವು ನಮ್ಮ ಬದುಕನ್ನು ಸುಲಭಗೊಳಿಸಬಹುದು, ಆದರೆ ಸಮಯವೇ ನಮ್ಮ ಬದುಕನ್ನು ಸುಂದರಗೊಳಿಸುತ್ತದೆ.

ಆದ್ದರಿಂದ, ನಾವು ನಮ್ಮ ಜೀವನದಲ್ಲಿ ಹಣ ಮತ್ತು ಸಮಯವನ್ನು ಜಾಣ್ಮೆಯಿಂದ ಬಳಸಬೇಕು. ಹಣವನ್ನು ಸರಿಯಾದ ಸ್ಥಳದಲ್ಲಿ ಖರ್ಚು ಮಾಡಬೇಕು, ಮತ್ತು ಸಮಯವನ್ನು ಅಮೂಲ್ಯ ಸಂಬಂಧಗಳು, ಆರೋಗ್ಯ ಮತ್ತು ಸಂತೋಷಕ್ಕಾಗಿ ಹೂಡಬೇಕು. ಅಷ್ಟೇ ಆಗ ಜೀವನವು ಸಂಪೂರ್ಣ ಮತ್ತು ಸಂತೃಪ್ತಿಕರವಾಗುತ್ತದೆ.



**-ಡಾ. ರವಿರಾಜು ಡಿ,**
ಸಹಾಯಕ ಪ್ರಾಧ್ಯಾಪಕರು,
ರಾಯಚೂರು

# ಸಾಹಿತ್ಯ ಕೃತಿ ಎಲ್ಲರೂ ಓದಲಿ: ಶಶಿಕಲಾ ಟೆಂಗಳಿ

**ಸಹಾಯವಾಣಿ ಸುದ್ದಿ**



ಕಲಬುರಗಿ: ಒಳ್ಳೆಯ ಸಮಾಜ ನಿರ್ಮಿಸುವಲ್ಲಿ ಶಿಕ್ಷಕರ ಪಾತ್ರ ಮಹತ್ವದ್ದಾಗಿದೆ. ಮಕ್ಕಳು ಮೊಬೈಲಗೆ ಮರುಳಾಗಿದ್ದಾರೆ. ಅವರಲ್ಲಿ ಉತ್ತಮ ಸಂಸ್ಕೃತಿ ರೂಪಿಸಲು ಕುಟುಂಬದ ಪಾತ್ರ ಮಹತ್ವದ್ದು,ಸಾಹಿತಿಗಳು, ಕವಿಗಳು ಕಾವ್ಯ ರಚಿಸುವ ಮೂಲಕ ಸಜ್ಜನರನ್ನು ರೂಪಿಸುತ್ತಾರೆ. ಎಲ್ಲರೂ ಸಾಹಿತ್ಯ ಕೃತಿಗಳನ್ನು ಓದಬೇಕೆಂದು ಮಹಿಳಾ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷೆ ಶಶಿಕಲಾ ಟೆಂಗಳಿ ಕರೆ ನೀಡಿದರು.

ಸಿರಿಗನ್ನಡ ವೇದಿಕೆ ಮತ್ತು ಸಾಕ್ಷಿ ಪ್ರತಿಷ್ಠಾನ ಏರ್ಪಡಿಸಿದ ಸಾಹಿತ್ಯ ಸಮಾಗಮ-11 ನೇ ಉಪನ್ಯಾಸ ಮಾಲಿಕೆಯ ಕವಿ ರೇವಣಸಿದ್ಧಪ್ಪ ದುಕಾನ ಅವರ ಬದುಕು- ಬರಹ ಉದ್ಘಾಟಿಸಿ ಮಾತನಾಡಿ ನಮ್ಮ ಬಡಾವಣೆಯಲ್ಲಿ ಇಂತಹ ವಿಚಾರವಂತ ಕವಿ ಇರುವುದು ನಮಗೆ ಹೆಮ್ಮೆ ಎನಿಸುತ್ತದೆಂದರು.ಅವರ ಮುಂದಿನ ಕೃತಿ ನಮ್ಮ ಮನೆಯ ಹೊರಾಂಡದಲ್ಲಿ ಬಿಡುಗಡೆ ಮಾಡುವಿದಾಗಿ ಹೇಳಿದರು.

ಮುಂಗನಸು ಕವನ ಸಂಕಲನದಲ್ಲಿ ಸಾಮಾಜಿಕ ಕಳಕಳಿ, ರಾಜಕೀಯ ಭ್ರಷ್ಟತೆ, ಹೆಣ್ಣಿನ ಬಗ್ಗೆ, ಈ ನಾಡಿನ ಕುರಿತು ಹಲವಾರು ಕವನದ ಮೂಲಕ ಜನರ ಎಚ್ಚರಿಸುವ ಕೆಲಸ ಕವಿ ಮಾಡಿದ್ದಾರೆ ಕಾವ್ಯ ಮೊನಚಾಗಿರಬೇಕು ಎಂದು ಸಾಹಿತಿ,ಪತ್ರಕರ್ತ ಡಾ.ಶಿವರಂಜನ್ ಸತ್ಯಂಪೇಟೆ ಅಭಿಮತ ಪಡಿಸಿದರು.

ಹೂಗನಸು ಕವನ ಸಂಕಲನ ಕುರಿತು ಸರಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು ಉಪನ್ಯಾಸಕಿ ಡಾ.ಶರಣಮ್ಮ ಪಾಟೀಲ ಅವರು ಜಾನಪದ, ವಚನದ ಪ್ರಭಾದಿಂದ ಇಲ್ಲಿನ ಕವನಗಳು ಅರಳಿವೆ.ಅವರ ಅನುಭವ ಮೂಲಕ ಸಮಾಜ,ಸಂಸ್ಕೃತಿ, ಎಲ್ಲಾ ಬಗೆಯ ಕವನದ ನೋಟ ಸಿಗುತ್ತವೆಂದವು.

ಅಧ್ಯಕ್ಷತೆಯನ್ನು ವಹಿಸಿದ ಡಾ.ಗವಿಸಿದ್ಧಪ್ಪ ಪಾಟೀಲ ಅವರು ಸಾಹಿತಿ,ಕವಿಗಳ ಕುರಿತು ಚಿಂತನೆ ಮಾಡುವ ಅಗತ್ಯ ಇಂದು ಇದೆ. ರೇವಣಸಿದ್ಧಪ್ಪ ದುಕಾನ ಅವರ ಎರಡು ಕಾವ್ಯದಲ್ಲಿ ಸಾಮಾಜಿಕ ಚಿಂತನೆ, ವಸ್ತು ವೈವಿಧ್ಯತೆ ಮೂಲಕ ಭರವಸೆ ನೀಡುತ್ತಾರೆ.

ಪ್ರಾರ್ಥನೆ ಗೀತೆಯನ್ನು ಡಾ.ಶೋಭಾದೇವಿ ಚೆಕ್ಕಿ ಹಾಡಿದರು.ಸಿರಿಗನ್ನಡ ವೇದಿಕೆ ಪ್ರಧಾನ ಕಾರ್ಯದರ್ಶಿ ಡಾ.ಸಿದ್ದಪ್ಪ ಹೊಸಮನಿ ಸ್ವಾಗತಿಸಿದರು, ಡಾ.ರಾಜಕುಮಾರ ಮಾಳಗೆ ನಿರೂಪಿಸಿದರು ಡಾ.ಶೀಲಾದೇವಿ ಎಸ್. ಬಿರಾದಾರ ವಂದಿಸಿದರು.

ಡಾ.ವಿಜಯಕುಮಾರ ಪರುತೆ, ಡಾ. ಜಯದೇವಿ ಗಸಯಕವಾಡ, ಡಾ.ಶ್ರೀಶೈಲ ಮದಾನೆ, ಡಾ.ಶಾಂತಪ್ಪ ಡಂಬಳ,ಸಿ.ಎಸ್. ಮಾಲಿಪಾಟೀಲ, ರಾಜೇಂದ್ರ ಝುಳಕಿ, ಡಾ.ಭೀಮಾಶಂಕರ ತಳವಾರ, ಮನೋಹರ ಮರಗುತ್ತಿ,ಸುರೇಶ ಹತ್ತಿ,ಡಾ.ಸಿದ್ದಲಿಂಗ ದಬ್ಬಾ,ಡಾ. ಶಿವಶರಣಪ್ಪ ದಾಬಾ,ಡಾ. ರವಿಕುಮಾರ ಕಾಂಬಳೆ,ಡಾ.ಕರಬಸಪ್ಪ, ಡಾ.ಪೀರಪ್ಪ ಸಜ್ಜನ,ಸಿದ್ದು ಕೋಣಿ,ಹನಮಂತ ಮರಡಿ,,ಡಾ.ಚಿದಾನಂದ ಕುಡ್ಡನ್,ಇತರ-ರಿದ್ದರು.

# ದಲಿತ ಸಂಘರ್ಷ ಸಮಿತಿ ಸಮಿತಿ ವತಿಯಿಂದ ಡಾ. ಬಿ.ಆರ್. ಅಂಬೇಡ್ಕರ್ ಹಾಗೂ ಡಾ.ಬಾಬು ಜಗಜೀವನ್ ರಾಮ್ ಜಯಂತಿ

**ಸಹಾಯವಾಣಿ ಸುದ್ದಿ**



ಶಿಡ್ಲಘಟ್ಟ: ದಲಿತ ಸಂಘರ್ಷ ಸಮಿತಿ (ಭೀಮ ಮಾರ್ಗ) ಚಿಕ್ಕಬಳ್ಳಾಪುರ ಜಿಲ್ಲಾ ಸಮಿತಿ ವತಿಯಿಂದ ಡಾ. ಬಿ.ಆರ್. ಅಂಬೇಡ್ಕರ್ ಅವರ 135ನೇ ಹಾಗೂ ಡಾ.ಬಾಬು ಜಗಜೀವನ್ ರಾಮ್ ಅವರ 119 ನೇ ಜಯಂತಿಯನ್ನು ನಗರದ ಹೊಸ ನಗರ ಸಭೆ ಮುಂಭಾಗ ಜಿಲ್ಲಾ ಉಸ್ತುವಾರಿ ನಾಗವೇಣಿ ಅವರ ನೇತೃತ್ವದಲ್ಲಿ ಅದ್ದೂ-ರಿಯಾಗಿ ಆಚರಿಸಲಾಯಿತು.

ನಗರದ ಇಂದಿರಾ ಕ್ಯಾಂಟೀನ್‌ನಿಂದ ಮೆರವಣಿಗೆ ಮೂಲಕ ಕಾರ್ಯಕ್ರಮ ಸ್ಥಳಕ್ಕೆ ಆಗಮಿಸಿದ ಅಂಬೇಡ್ಕರ್ ಅಭಿಮಾನಿಗಳು ನೀಲಿ ಧ್ವಜಗಳು, ತಮಟೆ, ಪಟಾಕಿಗಳೊಂದಿಗೆ ಸಂಭ್ರಮಿಸಿದರು.

ಕಾರ್ಯಕ್ರಮದಲ್ಲಿ ಅಂಬೇಡ್ಕರ್ ಅವರ ಜೀವನ-ಸಂವಿಧಾನ ಕುರಿತ ಸಾಂಸ್ಕೃತಿಕ ಕಾರ್ಯಕ್ರಮಗಳು ಹಾಗೂ ಗೀತೆಗಳು ಜರುಗಿದವು. ಅಂಬೇಡ್ಕರ್ ಮತ್ತು ಜಗಜೀವನ್ ರಾಮ್ ಅವರ ಭಾವಚಿತ್ರಗಳಿಗೆ ಪುಷ್ಪ ನಮನ ಸಲ್ಲಿಸಿ, ಜ್ಯೋತಿ ಬೆಳಗಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು.

ಈ ವೇಳೆ ಮಾತನಾಡಿದ ರಾಜ್ಯಾಧ್ಯಕ್ಷ ಡಾ.ಬಿ.ಎನ್ ವೆಂಕಟೇಶ್, ಶಿಡ್ಲಘಟ್ಟ ವಿಧಾನಸಭಾ ಕ್ಷೇತ್ರ ಅತ್ಯಂತ ಹಿಂದುಳಿದಿದ್ದು, ಬಡವರಿಗೆ ವಾಸಿಸಲು ಮನೆಗಳಿಲ್ಲ. ಒಂದೇ ಮನೆಯಲ್ಲಿ ಹತ್ತು ಜನ ವಾಸಿಸುವ ಪರಿಸ್ಥಿತಿ ಇದೆ. ಪ್ರತಿಯೊಬ್ಬರಿಗೂ ಸೂರು ಕಲ್ಪಿಸಲು ನಮ್ಮ ಸಂಘಟನೆಯಿಂದ ಹೋರಾಟ ನಡೆಸಲಾಗುತ್ತಿದೆ. ಇಲ್ಲಿನ ಸ್ಥಳೀಯ ಶಾಸಕರು ಹಾಗೂ ಸಂಸದರು ಬಡವರಿಗೆ ನಿವೇಶನ ಮತ್ತು ಮನೆ ನಿರ್ಮಾಣ ಮಾಡಿಕೊಡಬೇಕು. ಅಗತ್ಯವಿದ್ದರೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಸರ್ಕಾರದ ವಿರುದ್ಧವೂ ಹೋರಾಟಕ್ಕೆ ಮುಂದಾಗುತ್ತೇವೆ ಎಂದು ಎಚ್ಚರಿಕೆ ನೀಡಿದರು.

ಈ ಸಂದರ್ಭದಲ್ಲಿ ಭೀಮ ಮಾರ್ಗ ಜಿಲ್ಲಾ ಸಂಚಾಲಕಿ ನಾಗವೇಣಿ, ಸಮಾಜಸೇವಕ ಬೀರಪ್ಪನಹಳ್ಳಿ ನರಸಿಂಹಮೂರ್ತಿ,ವಕೀಲರ ಸಂಘದ ಅಧ್ಯಕ್ಷ ನಾರಾಯಣಸ್ವಾಮಿ, ಮುಖ್ಯ ಭಾಷಣಕಾರ ಡಾ. ಮೂರ್ತಿ ಸಾಮ್ರಾಟ್,ದಲಿತ ಮುಖಂಡ ನಾಗನರಸಿಂಹ, ಜಿಲ್ಲಾ ಮಾದರ ಮಹಾಸಭಾ ಕಾರ್ಯದರ್ಶಿ ವಿಶ್ವನಾಥ್, ಚಲಪತಿ, ರಾಮಾಂಜಿನಪ್ಪ, ಮಾದರ ಮಹಾಸಭಾ ಅಧ್ಯಕ್ಷ ದೇವರಾಜ್, ಮುತ್ತೂರು ವೆಂಕಟೇಶ್, ಎನ್‌ಎಸ್‌ಯುಐ ಮುಖಂಡ ಮುನೇಂದ್ರ ಸೇರಿದಂತೆ ದಲಿತ ಸಂಘರ್ಷ ಸಮಿತಿ ಭೀಮ ಮಾರ್ಗದ ಪದಾಧಿಕಾ-ರಿಗಳು ಉಪಸ್ಥಿತರಿದ್ದರು.

# ಮಹಿಳಾ ಮೀಸಲಾತಿ ವಿಚಾರದಲ್ಲಿ ಕಾಂಗ್ರೆಸ್ ಪಕ್ಷವು ವಿರುದ್ಧವಿಲ್ಲ- ಕಾಂಗ್ರೆಸ್ ಮುಖಂಡ ಪುಟ್ಟು ಆಂಜಿನಪ್ಪ

**ಸಹಾಯವಾಣಿ ಸುದ್ದಿ**



ಶಿಡ್ಲಘಟ್ಟ: ಮಹಿಳಾ ಮೀಸಲಾತಿ ವಿಚಾರದಲ್ಲಿ ಕಾಂಗ್ರೆಸ್ ಪಕ್ಷವು ಮಹಿಳೆಯರ ವಿರುದ್ಧವಲ್ಲ ಎಂದು ಶಿಡ್ಲಘಟ್ಟ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಮುಖಂಡ ಪುಟ್ಟು ಆಂಜಿನಪ್ಪ ಸ್ಪಷ್ಟಪಡಿಸಿದರು.

ನಗರದ ಕರಗದಮ್ಮ ದೇವಿ ದೇವಾಲಯಕ್ಕೆ ಭೇಟಿ ನೀಡಿ ವಿಶೇಷ ಪೂಜೆ ಸಲ್ಲಿಸಿ ನಂತರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಬಿಜೆಪಿ ಇದನ್ನು ನಾಟಕೀಯ ಬೆಳವಣಿಗೆಯಾಗಿ ಮುಂದಿಟ್ಟಿದೆ. ಯಾವುದೇ ಸಮಗ್ರ ಚರ್ಚೆ ಇಲ್ಲದೆ ಕ್ಷೇತ್ರ ಪುನರ್‌ವಿಂಗಡಣೆ ಜೊತೆಗೆ ಮಹಿಳಾ ಮೀಸಲು ಬಿಲ್ ಪಾಸ್ ಮಾಡಲು ಮುಂದಾಗಿರುವುದು ರಾಜಕೀಯ ಉದ್ದೇಶ ಹೊಂದಿದೆ. ತಮ್ಮ ಅಧಿಕಾರವನ್ನು ಬಲಪಡಿಸಲು ಈ ಕ್ರಮ ಕೈಗೊಳ್ಳಲಾಗಿದೆ. ಚಾಣಾಕ್ಯನಿಗಿಂತ ನಾನು ಚತುರ ಎಂದು ಅಮಿತ್ ಶಾ ಒಂದು ಹೆಜ್ಜೆ ಮುಂದೆ ಇದ್ದರೂ, ಈ ಬಿಲ್ಲಿಗೆ ದಿಲ್ಲಿಯಲ್ಲಿ ಬಹುಮತ ಸಿಗುವುದಿಲ್ಲ ಎಂಬುದು ಅವರಿಗೆ ತಿಳಿದಿತ್ತು. ಇಲ್ಲಿ ನಮಗೆ ಬಹುಮತ ಸಿಗುವುದಿಲ್ಲ ನಾವು ಸೋಲುವುದು ಗ್ಯಾರೆಂಟಿ ಆದರೂ ನಮ್ಮ ಸೋಲು ಐದು ರಾಜ್ಯಗಳ ಚುನಾವಣೆಯಲ್ಲಿ ಮತ ಪಡೆಯುವ ಲಾಭ ಇದು. ಮಹಿಳಾ ಮೀಸಲಾತಿ ಅನ್ನುವುದು ರಾಜಕೀಯದ ಬೇಳೆ ಬೇಯಿಸಿಕೊಳ್ಳಲು ಈ ರೀತಿಯಾಗಿ ತರಾತುರಿಯಲ್ಲಿ ಬಿಲ್ ಪಾಸ್ ಮಾಡಲು ಮುಂದಾಗಿರುವುದು. ಮಹಿಳೆಯರ ಶಕ್ತಿ ಮತ್ತು ಅವರ ಸಬಲೀಕರಣಕ್ಕೆ ಮಾಡಿರುವದಲ್ಲ ಎಂದು ಸ್ಪಷ್ಟವಾಗಿ ತಿಳಿ ಯುತ್ತದೆ ಎಂದು ಆರೋಪಿಸಿದರು.

ಕಾಂಗ್ರೆಸ್ ನ ಹೈಕಮಾಂಡ್ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಾ. ಎಂ ಸಿ ಸುಧಾಕರ್ ಅವರು ದಾವಣಗೆರೆ ಉಪಚುನಾವಣೆಯ ಜವಾಬ್ದಾರಿಯನ್ನ ನನ್ನ ಹೆಗಲಿಗೆ ನೀಡಿದ್ದರು. ಈ ಹಿನ್ನೆಲೆಯಲ್ಲಿ ಕರಗ ಮಹೋತ್ಸವಕ್ಕೆ ಹಾಜರಾಗಲು ಸಾಧ್ಯವಾಗಲಿಲ್ಲ. ಆದರೂ ಮಹೋತ್ಸವ ಅದ್ದೂರಿಯಾಗಿ ನಡೆದಿರುವುದು ಸಂತೋಷಕರ. ಈ ದಿನ ದೇವಾಲಯಕ್ಕೆ ಬರಮಾಡಿಕೊಂಡು ಗೌರವಿಸಿರುವುದು ತುಂಬಾ ಖುಷಿ ತಂದಿದೆ. ತಾಯಿ ಕರಗದಮ್ಮನ ಆಶೀರ್ವಾದ ಎಲ್ಲ-ರಿಗೂ ಇರಲಿ ಎಂದು ಶುಭ ಹಾರೈಸಿದರು.

ಈ ಸಂದರ್ಭದಲ್ಲಿ ಮಯೂರ ಸರ್ಕಲ್ ರಾಜಕುಮಾರ್, ರಾಮಾಂಜಿ, ಭೂದಾಳ ವರದರಾಜ, ಬಾಬು, ಕೇಶವಮೂರ್ತಿ, ಸುರೇಶ್ ಕುಮಾರ್, ಶ್ರೀಧರ್, ಅರ್ಚಕರು ಹಾಗೂ ಹಲವರು ಉಪಸ್ಥಿತರಿದ್ದರು.

# ಸರ್ವಜ್ಞ, ಜಸ್ಟಿಸ್ ಶಿವರಾಜ ಪಾಟೀಲ ಕಾಲೇಜಿನಲ್ಲಿಡಾ.ನಾ ಸೋಮೇಶ್ವರ ವಿಶೇಷ ಉಪನ್ಯಾಸ

**ಸಹಾಯವಾಣಿ ಸುದ್ದಿ**




ಕಲಬುರಗಿ: ನಗರದ ಸರ್ವಜ್ಞ ಮತ್ತು ಜಸ್ಟಿಸ್ ಶಿವರಾಜ ಪಾಟೀಲ ಪದವಿ ಪೂರ್ವ ವಿಜ್ಞಾನ ಮಹಾವಿದ್ಯಾಲಯದಲ್ಲಿ ವೈದ್ಯ ಸಂತ ಡಾ. ಎಸ್. ಎಸ್. ಸಿದ್ದಾರೆಡ್ಡಿ ಅವರ 11ನೇ ಪುಣ್ಯ ಸ್ಮರಣೆ ನಿಮಿತ್ತ "ಕಲಿಕೆ, ಓದು ಮತ್ತು ನೆನಪು" ವಿಷಯವನ್ನು ಕು-ರಿತು ಚಂದನ ದೂರದರ್ಶನ ವಾಹಿನಿಯ ಖ್ಯಾತಿಯ ಡಾ.ನಾ. ಸೋಮೇಶ್ವರ ಅವರು ವಿಶೇಷ ಉಪನ್ಯಾಸ ನೀಡಿದರು.

ಅವರು ತಮ್ಮ ಉಪನ್ಯಾಸದಲ್ಲಿ ನಮ್ಮ ಮೆದುಳು ತನಗೆ ಹಿತವಾದದನ್ನು ನೆನಪಿನಲ್ಲಿಟ್ಟುಕೊಳ್ಳುತ್ತದೆ. ಅಹಿತವಾದದ್ದನ್ನು ತಿರಸ್ಕರಿಸುತ್ತದೆ. ವಿದ್ಯಾರ್ಥಿಗಳು ವಿಷಯಗಳನ್ನು ಇಷ್ಟಪಟ್ಟು ಓದಬೇಕು, ಕಷ್ಟಪಟ್ಟು ಓದಬಾರದು. ಅಂಕಗಳಿಗಾಗಿ ಓದುವುದರೊಂದಿಗೆ ಉತ್ತಮ ಜ್ಞಾನ ಅರಿವನ್ನು ಪಡೆಯಲು ಓದಬೇಕು. ಶಾರ್ಟ್ ಕಟ್ ಹೋಗಬಾರದು. ಚೆನ್ನಾಗಿ ಓದಬೇಕು. ಅದಕ್ಕಾಗಿ ಮನುಷ್ಯ ತನ್ನ ಬುದ್ಧಿವಂತಿಕೆಯನ್ನು ಹೆಚ್ಚಿಸಿಕೊಳ್ಳಬೇಕು. ಹಿಂದಿನ 10 ವರ್ಷಗಳ 20 ಪ್ರಶ್ನೆ ಪತ್ರಿಕೆಗಳನ್ನು ಸಂಗ್ರಹಿಸಿ ಇಟ್ಟುಕೊಂಡು ಯಾವ ರೀತಿ ಪ್ರಶ್ನೆಗಳು ಬರುತ್ತವೆ ಎಂದು ತಿಳಿದುಕೊಂಡು ಓದಬೇಕು. ನಿಯಮಿತ ಅವಧಿಯಲ್ಲಿ ಮರು ಅಧ್ಯಯನ, ಪರಾಮರ್ಶನ ಮಾಡಬೇಕು.

ಓದಿದ್ದನ್ನು ಮತ್ತೆ ಪುನರಾವರ್ತನೆ ಮಾಡಿಕೊಳ್ಳಬೇಕು, ನೆನಪಿಸಿಕೊಳ್ಳಬೇಕು. ವಿದ್ಯಾರ್ಥಿಗಳು ಪರೀಕ್ಷೆ ಭಯ ಬಿಟ್ಟು, ಧೈರ್ಯದಿಂದ ಪರೀಕ್ಷೆ ಎದುರಿಸಿ ಅಂದಾಗ ಹೆಚ್ಚು ಅಂಕ ಪಡೆಯಲು ಸಾಧ್ಯ ಫೇಲ್ ಆಗುತ್ತೇನೆ ಎಂಬ ಆತಂಕ ಬಿಟ್ಟು, ನಿಮ್ಮ ಮನಸ್ಸಿನಲ್ಲಿಯೇ ನಿರ್ಧಾರ ಮಾಡಿಕೊಂಡು, ಪ್ರಾಮಾಣಿಕವಾಗಿ ಓದಿದಾಗ ಪಾಸಾಗುತ್ತಿರಿ. ಇದರಿಂದ ನಿಮ್ಮಲ್ಲಿರುವ ಪರೀಕ್ಷಾ ಭಯ ದೂರವಾಗುತ್ತದೆ ಎಂದರು. ವಿದ್ಯಾರ್ಥಿಗಳು ಓದಿಗೆ ದೈನಂದಿನ ದಿನಚರಿ ಹಾಕಿಕೊಳ್ಳಬೇಕು. 24 ಗಂಟೆಯಲ್ಲಿ 12 ಗಂಟೆ ಓದಿಗೆ. 7 ಗಂಟೆ ನಿದ್ದೆಗೆ, 1 ಗಂಟೆ ಊಟಕ್ಕೆ, 2 ಗಂಟೆ ಅನೀರಿಕ್ಷಿತ ಚಟುವಟಿಕೆಗಳಿಗೆ, 2 ಗಂಟೆ ಇತರೆ ಕಾರ್ಯಕ್ಕೆ ಮೀಸಲಿಡಿ, ಪ್ರತಿದಿನ ಬೆಳಿಗ್ಗೆ, ಸಂಜೆ ಸ್ನಾನ ಮಾಡಿ ಹೀಗೆ ಮಾಡುವುದರಿಂದ ದೇಹದಲ್ಲಿ ರಕ್ತ ಪರಿಚಲನೆ ಸರಾಗವಾಗುವುದು. ಓದಿನ ಕಡೆ ಗಮನ ಹರಿಯುವುದು. ನಿರಂತರ ಓದಿನ ಮಧ್ಯೆ ಪ್ರತಿ ಗಂಟೆಗೆ 5 ರಿಂದ 10 ನಿಮಿಷ ವಿಶ್ರಾಂತಿ ಇರಲಿ. ಇದರಿಂದ ಮಿದುಳು ಚುರುಕುಗೊಳ್ಳುವುದು. ಮುಂದಿನ ಓದಿಗೆ ಉತ್ಸುಕತೆ ಹೆಚ್ಚುವುದು. ಹತ್ತುದಿನಗಳ ಓದಿನ ಮಟ್ಟಿಗೆ ಈ ಪದ್ಧತಿ ಅಳವಡಿಸಿಕೊಂಡರೆ ಪರೀಕ್ಷೆಯಲ್ಲಿ ಉತ್ತಮ ಅಂಕಗಳಿಸಲು ಸಾಧ್ಯವಾಗುವುದು ಎಂದು ಪ್ರೇರೇಪಿಸಿದರು.

ಕಾರ್ಯಕ್ರಮದ ಅಧ್ಯಕ್ಷರು ಸಂಸ್ಥೆಯ ಸಂಸ್ಥಾಪಕರು ಆದ ಪ್ರೊಫೆಸರ್ ಚೆನ್ನಾರೆಡ್ಡಿ ಪಾಟೀಲ್ ಅವರು ಮಾತನಾಡಿದರು. ಕಾರ್ಯಕ್ರಮದಲ್ಲಿ ಸಂಸ್ಥೆಯ ಮುಖ್ಯ ಶೈಕ್ಷಣಿಕ ನಿರ್ದೇಶಕ ಅಭಿಷೇಕ್ ಚನ್ನಾರೆಡ್ಡಿ ಪಾಟೀಲ್, ಡಾ. ರಾಕೇಶ್ ಚನ್ನಾರೆಡ್ಡಿ ಪಾಟೀಲ್, ಡಾ. ಸಿದ್ದಲಿಂಗ ರೆಡ್ಡಿ, ಎಸ್. ಎಸ್. ಹಿರೇಮಠ್, ಪ್ರಭುಗೌಡ ಸಿದ್ದಾರೆಡ್ಡಿ, ಪ್ರಾಚಾರ್ಯ ಪ್ರಶಾಂತ್ ಕುಲಕರ್ಣಿ, ಪ್ರಾಚಾರ್ಯರಾದ ವಿನುತಾ ಆರ್.ಬಿ.,ಕರುಣೇಶ್ ಹಿರೇಮಠ,ಗುರುರಾಜ ಕುಲಕರ್ಣಿ, ಉಪನ್ಯಾಸಕರು, ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಡಾ. ಶಶಿಶೇಖರ್ ರೆಡ್ಡಿ ಅತಿಥಿಗಳನ್ನು ಪರಿಚಯಿಸಿ ಸ್ವಾಗತಿಸಿದರು. ಡಾ. ವಿದ್ಯಾವತಿ ಪಾಟೀಲ ನಿರೂಪಿಸಿದರು.



**ಸಹಾಯವಾಣಿ ಸುದ್ದಿ**

**ಮಂಗಳೂರು ಕಟೀಲು ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದಲ್ಲಿ ಏಪ್ರಿಲ್ 14ರಿಂದ 21ರವರೆಗೆ ಜಾತ್ರಾಮಹೋತ್ಸವ ನಡೆಯಲಿದೆ. 20ನೇ ತಾರೀಕಿನಂದು ಹಗಲು ರಥೋತ್ಸವ ಹಾಗೂ 21ನೇ ತಾರೀಕಿನಂದು ರಾತ್ರಿ ರಥೋತ್ಸವ ಸೂಟೆದರ ಹಾಗೂ ಶಿಬರೂರು ಕೊಡಮನಿತ್ತಾಯ ದೈವದ ಭಂಡಾರ ಆಗಮನ ನಡೆಯಲಿದೆ ಇದು ಧಕ್ಷಿಣ ಕನ್ನಡಲ್ಲಿ ಇತಿಹಾಸ ಪಡೆದ ಕ್ಷೇತ್ರವಾಗಿದೆ ದಿನಪ್ರತಿ ಅನ್ನದಾನ ಹಾಗೂ ವಿವಿಧ ಕಾರ್ಯಕ್ರಮ ನಡೆದಿದೆ.**

# ವಾಡಿ: ವ್ಯಕ್ತಿಯ ಬರ್ಬರ ಹತ್ಯೆ

**ಸಹಾಯವಾಣಿ ಸುದ್ದಿ**

ವಾಡಿ: ಚಿತ್ತಾಪುರ ತಾಲೂಕಿನ ವಾಡಿ ಪಟ್ಟಣದಲ್ಲಿ ಸೋಮವಾರ ಮಧ್ಯಾಹ್ನ ದುಷ್ಕರ್ಮಿಗಳು ನಡೆಸಿದ ಗುಂಡಿನ ದಾಳಿಗೆ ವ್ಯಕ್ತಿಯೊಬ್ಬ ಸ್ಥಳದಲ್ಲೇ ಸಾವನ್ನಪ್ಪಿದ ಘಟನೆ ನಡೆದಿದೆ. ವಾಡಿ ಲಾರಿ ಓನರ್ಸ್ ಅಸೋಸಿಯೇಷನ ಮಾಜಿ ಅಧ್ಯಕ್ಷ ಇರ್ಫಾನ್ ಪಟೇಲ (43) ಕೊಲೆಯಾದ ವ್ಯಕ್ತಿ.

ಇರ್ಫಾನ್ ಅವರು ಬಲರಾಮ ಚೌಕ್‌ನಿಂದ ಸ್ಕೂಟರ್ ಮೇಲೆ ವಾಡಿ ಪಟ್ಟಣದ ಕಡೆಗೆ ತೆರಳುತ್ತಿದ್ದ ಸಂದರ್ಭದಲ್ಲಿ ದುಷ್ಕರ್ಮಿಗಳು ಕಾರಿನಿಂದ ಸ್ಕೂಟರ್‌ಗೆ ವೇಗವಾಗಿ ಡಿಕ್ಕಿ ಹೊಡೆದಿದ್ದಾರೆ. ಸ್ಕೂಟರ್‌ನಿಂದ ಕೆಳಗೆ ಬಿದ್ದ ಇರ್ಫಾನ್ ಮೇಲೆ ಎರಡು ಸುತ್ತು ಗುಂಡು ಹಾರಿಸಿ ನಂತರ, ಮಚ್ಚು ಹಾಗೂ ಚಾಕುವಿನಿಂದ ಮುಖ ಮತ್ತು ಕುತ್ತಿಗೆಗೆ ಹಲವು ಬಾರಿ ಇರಿದು ಬರ್ಬರವಾಗಿ ಕೊಲೆಗೈದಿದ್ದಾರೆ. ಘಟನೆ ನಂತರ ಆರೋಪಿಗಳು ತಾವು ತಂದಿದ್ದ ವಾಹನ ಅಲ್ಲೇ ಬಿಟ್ಟು ಮತ್ತೊಂದು ವಾಹನದಲ್ಲಿ ಪರಾರಿಯಾಗಿದ್ದಾರೆ ಎನ್ನಲಾಗಿದೆ.

# ಮಾದಿಗ ಸಮಾಜದಿಂದ ಬಸವಜಯಂತಿ ಭವ್ಯಮೆರವಣಿಗೆ

**ಸಹಾಯವಾಣಿ ಸುದ್ದಿ**




ಕಲಬುರಗಿ: ಜಿಲ್ಲಾ ಮಾದಿಗ ಸಮಾಜದ ವತಿಯಿಂದ ಮಲ್ಲಿಕಾರ್ಜುನ ಜಿನಿಕೇರಿ ಅವರ ನೇತೃತ್ವದಲ್ಲಿ ಸಮಾನತೆಯ ಹ-ರಿಕಾರ, ಜಗಜ್ಯೋತಿ ಬಸವಣ್ಣನವರ ಜಯಂತ್ಯೋತ್ಸವ ಪ್ರಯುಕ್ತ ಕಲಬುರಗಿ ನಗರದಲ್ಲಿ ಡಾ. ಬಾಬು ಜಗಜೀವನ್ ರಾಮ್ ಅವರ ಪುತ್ಥಳಿ ಆವರಣದಿಂದ ಜಗತ್ ವೃತ್ತದವರೆಗೆ ಭವ್ಯ ಮೆರವಣಿಗೆ ಹಮ್ಮಿಕೊಳ್ಳಲಾಯಿತು.

ನಂತರ ಮುಖಂಡರು ಬಸವಣ್ಣನವರ ಪ್ರತಿಮೆಗೆ ಮಾಲಾರ್ಪಣೆ ಮಾಡಿ ನಮನ ಸಲ್ಲಿಸಿದರು. ಈ ಸಂದರ್ಭದಲ್ಲಿ ಮಾದಿಗ ಸಮಾಜದ ಮುಖಂಡರಾದ ಲಿಂಗರಾಜ ತಾರಫೈಲ್, ಸುಶೀಲ್ ಕಾಂಬಳೆ , ಹನಮಂತ ತುಮಕೂರ್ , ರಮೇಶ್ ವಾಡೇಕರ್, ದಶರಥ್ ಕಲಗುರ್ತಿ, ಜಾನಪ್ಪ ಶಿವನೂರ್ , ಬಂಡೇಶ್ ರತ್ನಾಡಗಿ, ದಿಗಂಬರ್ ತ್ರಿಮೂರ್ತಿ, ಕೃಷ್ಣ ತಂಗಡಗಿ, ಪ್ರಕಾಶ್ ಮಾಳಿಗೆ , ಸಚಿನ್ ಕಟ್ಟಿಮನಿ , ಹಾಗೂ ಪ್ರದೀಪ್ ಭಾಚನಳಕರ್ ಸಮಾಜದ ಇನ್ನಿತರರು ಮುಖಂಡರು ಉಪಸ್ಥಿತರಿದ್ದರು

### ಜಿ.ಪಂ ಸಿಇಒ ರಿಂದ ಗ್ರಾಮೀಣ ಪ್ರದೇಶದಲ್ಲಿ ಪ್ರವಾಸ

## ಹಳೆ ಶಿಲಾಯುಗದ ಸಂಸ್ಕೃತಿ ಪಳೆಯುಳಿಕೆ ಪುನರುಜ್ಜೀವನಗೊಳಿಸಲು ಈಶ್ವರ ಕುಮಾರ್ ಕಾಂದೂ ಸಲಹೆ

**ಸಹಾಯವಾಣಿ ಸುದ್ದಿ**



ರಾಯಚೂರು: ಜಿಲ್ಲೆಯ ಲಿಂಗಸೂಗೂರು ತಾಲ್ಲೂಕಿನ ನಾಗಲಾಪೂರು ಗ್ರಾಮ ಪಂಚಾಯತಿ ವ್ಯಾಪ್ತಿಯ ಪಿಕಳಿಹಾಳ ಗ್ರಾಮದ ಗುಡ್ಡದಲ್ಲಿರುವ ಹಳೆ ಶಿಲಾಯುಗದ ಸ್ಥಳಕ್ಕೆ ಏಪ್ರಿಲ್ 21ರ ಮಂಗಳವಾರ ದಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಈಶ್ವರ್ ಕುಮಾರ್ ಕಾಂದೂ ಅವರು ಭೇಟಿ ನೀಡಿ, ಪರಿವೀಕ್ಷಣೆ ಮಾಡಿದರು.

ನಾಗಲಾಪುರ ಗ್ರಾಮ ಪಂಚಾಯತಿಯ ಪಿಕಳಿಹಾಳ ಗ್ರಾಮದ ಗುಡ್ಡದಲ್ಲಿರುವ ಹಳೆಯ ಶಿಲಾಯುಗದ ಬಗ್ಗೆ ಪುರಾತತ್ವ ಸಂಶೋಧನೆ ನಡೆಸಿರುವ ಬ್ರಿಟಿಷ್ ಪುರಾತತ್ವ ಶಾಸ್ತ್ರಜ್ಞರು 1960ನೇ ಇಸವಿಯಲ್ಲಿ ಉತ್ಖನನ ನಡೆಸಿದರು.

ಇದು ಉತ್ಖನನದಿಂದ ಶಿಲಾ ಯುಗದ ಅನೇಕ ಕುರುಹುಗಳು ಪತ್ತೆಯಾಗಿವೆ. ಹಾಗೂ ಐತಿಹಾಸಿಕ ಮಹತ್ವ ಈ ಪ್ರದೇಶವು ಹಿಂದಿನ ಮಾನವ ವಸಹಾತುಗಳ ಇತಿಹಾಸಕ್ಕೆ ಸಾಕ್ಷಿಯಾಗಿವೆ ಎಂದರು.

ಭೂದೃಶ್ಯ ಮತ್ತು ಬಂಡೆಯ ಆಶ್ರಯಗಳು ಇತ್ತೀಚಿನವರೆಗೂ ಪುರಾತತ್ವ ಶಾಸ್ತ್ರಜ್ಞ ಸಂಶೋಧನೆಗಳು ಹೆಚ್ಚಿನ ಅಧ್ಯಯನಕ್ಕೆ ಒತ್ತು ನೀಡಿವೆ. ಆದ್ದರಿಂದ ಹಳೆಯ ಶಿಲಾಯುಗದ ಕುರುಹುಗಳನ್ನು ಪುನರುಜ್ಜೀವನಗೊಳಿಸಲು ಮತ್ತು ಸಂರಕ್ಷಿಸಲು ಸಂಬಂಧಿಸಿದ ಇಲಾಖೆಯ ಅಧಿಕಾರಿಗಳು ಕ್ರಮ ವಹಿಸಬೇಕೆಂದರು.

ಇದೇ ಸಂದರ್ಭದಲ್ಲಿ ಲಿಂಗಸುಗೂರು ತಾಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ ಉಮೇಶ, ಗ್ರಾಮೀಣ ಉದ್ಯೋಗ ಖಾತ್ರಿ ಸಹಾಯಕ ನಿರ್ದೇಶಕ ವೆಂಕಟೇಶ ದೇಸಾಯಿ, ಪಂಚಾಯತ್ ರಾಜ್ ಇಲಾಖೆಯ ಸಹಾಯಕ ನಿರ್ದೇಶಕ ಪಂಪನಗೌಡ, ಪಿಡಿಒ ಬಸವರಾಜ, ಕಾರ್ಯದರ್ಶಿ ಚನ್ನಬಸವ ಸೇರಿದಂತೆ ತಾಂತ್ರಿಕ ಸಂಯೋಜಕರು, ತಾಂತ್ರಿಕ ಸಹಾಯಕರು, ಐಇಸಿ ಸಂಯೋಜಕರು ಹಾಗೂ ಗ್ರಾಮ ಪಂಚಾಯತ್ ಸಿಬ್ಬಂದಿಗಳು ಇದ್ದರು.

## ಶ್ರೀ ಚೌಡೇಶ್ವರಿ ಜಾತ್ರಾ ಮಹೋತ್ಸವ: ಭಕ್ತಿ, ಭವ್ಯತೆಗೂಡಿದ ಸಹಸ್ರದೀಪೋತ್ಸವ – ಸಾವಿರಾರು ಭಕ್ತರ ಸಂಭ್ರಮ





**ಸಹಾಯವಾಣಿ ಸುದ್ದಿ**

ಮಾನ್ವಿ: ಪಟ್ಟಣದ ತೊಗಟವೀರ ಕ್ಷತ್ರಿಯ ಸಮಾಜದ ವತಿಯಿಂದ ಶ್ರೀ ಚೌಡೇಶ್ವರಿ ದೇವಿಯ 39ನೇ ವಾರ್ಷಿಕ ಜಾತ್ರಾ ಮಹೋತ್ಸವವು ಭಕ್ತಿ, ಸಂಪ್ರದಾಯ ಮತ್ತು ಸಾಂಸ್ಕೃತಿಕ ವೈಭವದೊಂದಿಗೆ ಅದ್ದೂರಿಯಾಗಿ ನೆರವೇರಿತು.

ರವಿವಾರ ಬೆಳಿಗ್ಗೆ ಜಡೇ ಬಸವೇಶ್ವರ ಗುಡಿಯಿಂದ ಗಂಗಾಜಲ ತಂದು, ಶ್ರೀ ಚೌಡೇಶ್ವರಿ ದೇವಿಯ ಉತ್ಸವ ಮೂರ್ತಿಯನ್ನು ಪಲ್ಲಕ್ಕಿಯಲ್ಲಿ ಪ್ರತಿಷ್ಠಾಪಿಸಿ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಭಕ್ತಿಪೂರ್ವಕ ಮೆರವಣಿಗೆ ನಡೆಸಲಾಯಿತು. ಸುಮಂಗಲಿಯರು ಕಳಸ ಕುಂಭ, ನಂದಿ ಕೋಲು ಸೇವೆಗಳೊಂದಿಗೆ ಮೆರವಣಿಗೆಯಲ್ಲಿ ಪಾಲ್ಗೊಂಡು ಸಂಪ್ರದಾಯದ ಸೊಬಗು ಹೆಚ್ಚಿಸಿದರು. ಬಳಿಕ ಪವಿತ್ರ ಜಲದಿಂದ ದೇವಿಗೆ ಅಭಿಷೇಕ ನೆರವೇರಿಸಲಾಯಿತು.

ಸಂಜೆ ದೇವಸ್ಥಾನದ ಆವರಣದಲ್ಲಿ ತೊಗಟವೀರ ಕ್ಷತ್ರಿಯ ಯುವಕ ಸಂಘದ ವತಿಯಿಂದ ಸಹಸ್ರದೀಪೋತ್ಸವ ಕಾರ್ಯಕ್ರಮ ವಿಜೃಂಭಣೆಯಿಂದ ಜರುಗಿತು. ತಾಲೂಕಾ ನೇಕಾರ ಸಮುದಾಯ ಒಕ್ಕೂಟದ ಅಧ್ಯಕ್ಷ ಕೆ.ಈ. ನರಸಿಂಹ ದೀಪ ಬೆಳಗಿಸಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಈ ವೇಳೆ ಮಾತನಾಡಿದ ಅವರು, ನೇಕಾರ ಸಮುದಾಯಗಳು ಸಂಘಟಿತರಾದಲ್ಲಿ ಮಾತ್ರ ಸಮಗ್ರ ಅಭಿವೃದ್ಧಿ ಸಾಧ್ಯವಾಗುತ್ತದೆ. ಪಾಲಕರು ಮಕ್ಕಳ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡಬೇಕು ಎಂದು ಕರೆ ನೀಡಿದರು. ಜೊತೆಗೆ ತಾಲೂಕಿನ ನೇಕಾರ ಸಮುದಾಯದ ವಿದ್ಯಾರ್ಥಿಗಳಿಗೆ ನೇತಾಜಿ ಶಿಕ್ಷಣ ಸಂಸ್ಥೆಯಲ್ಲಿ ದಾಖಲಾದಲ್ಲಿ ಶೇ.50 ರಷ್ಟು ಶುಲ್ಕ ವಿನಾಯಿತಿ ನೀಡಲಾಗುವುದು ಎಂದು ತಿಳಿಸಿದರು.

ಸಾಹಿತಿ ರಮೇಶಬಾಬು ಯಾಳಗಿ ವಿಶೇಷ ಉಪನ್ಯಾಸ ನೀಡಿ, "ದೀಪೋತ್ಸವವು ಜ್ಞಾನ ಮತ್ತು ಬೆಳಕಿನ ಸಂಕೇತ. ಅಜ್ಞಾನವನ್ನು ತೊರೆದು ಜ್ಞಾನದ ಮಾರ್ಗದಲ್ಲಿ ನಡೆಯುವ ಸಂದೇಶವನ್ನು ಇದು ನೀಡುತ್ತದೆ" ಎಂದು ಅಭಿಪ್ರಾಯಪಟ್ಟರು.

ಸಹಸ್ರದೀಪೋತ್ಸವದಲ್ಲಿ ಸಾವಿರಾರು ಭಕ್ತರು ಭಾಗವಹಿಸಿ ದೀಪಗಳನ್ನು ಬೆಳಗುವ ಮೂಲಕ ಭಕ್ತಿಭಾವ ವ್ಯಕ್ತಪಡಿಸಿದರು.

ಇದೇ ಸಂದರ್ಭದಲ್ಲಿ ಶ್ರೀ ಚೌಡೇಶ್ವರಿ ಮಹಿಳಾ ಮಂಡಳಿಯವರಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ನೆರವೇರಿದ್ದು, ಸ್ಥಳೀಯ ಕಲಾವಿದರ ಪ್ರತಿಭೆಗೆ ವೇದಿಕೆ ಒದಗಿಸಿತು.

ಕಾರ್ಯಕ್ರಮದಲ್ಲಿ ಜಿಲ್ಲಾ ನೇಕಾರ ಸಮುದಾಯಗಳ ಒಕ್ಕೂಟದ ಅಧ್ಯಕ್ಷರು ಹಾಗೂ ತಾಲೂಕಾ ತೊಗಟವೀರ ಕ್ಷತ್ರಿಯ ಸಮಾಜದ ಉಪಾಧ್ಯಕ್ಷ ಜಿ. ನಾಗರಾಜ, ಸಮಾಜದ ಪದಾಧಿಕಾರಿಗಳಾದ ಎಚ್.ಟಿ. ದತ್ತಾತ್ರೇಯ, ಹೆಚ್. ಟಿ. ಪ್ರಕಾಶಬಾಬು, ಶ್ರೀನಿವಾಸ್, ಡಿ. ವೀರೇಶ, ಆರ್. ಸುಭಾಷಚಂದ್ರ, ಯುವಕ ಸಂಘದ ಅಧ್ಯಕ್ಷ ಚೌಡಂ ರಾಜೇಶ್, ಗೌರವಾಧ್ಯಕ್ಷ ವರ ಪ್ರಸಾದ, ಚೌಡೇಶ್ವರಿ ಮಹಿಳಾ ಮಂಡಳಿಯ ಅಧ್ಯಕ್ಷೆ ಅನ್ನಪೂರ್ಣ ಗೂಡ, ಆನಂದ ಉಪ್ಪಳ, ಪಿರಿಮಳ್ ವೀರೇಶ್, ಕೆ. ನವೀನ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಜಾತ್ರಾ ಮಹೋತ್ಸವವು ಸಮುದಾಯದ ಐಕ್ಯತೆ, ಸಂಸ್ಕೃತಿ ಮತ್ತು ಭಕ್ತಿಯ ಪ್ರತಿಬಿಂಬವಾಗಿ ಮೂಡಿ ಬಂದಿದ್ದು, ಭಾಗವಹಿಸಿದ ಭಕ್ತರಲ್ಲಿ ಆಧ್ಯಾತ್ಮಿಕ ಉತ್ಸಾಹವನ್ನು ಮೂಡಿಸಿತು.

## ಸಮ ಸಮಾಜ ನಿರ್ಮಾಣಕ್ಕೆ ಬಸವಣ್ಣನ ತತ್ವಗಳೇ ದಾರಿ: ಶಿಕ್ಷಕ ಶರಣಪ್ಪ ಸಜ್ಜನ

**ಸಹಾಯವಾಣಿ ಸುದ್ದಿ**



ಲಿಂಗಸುಗೂರು: ಬಸವಣ್ಣನವರ ಸಮಾನತೆ, ಕಾಯಕ ಮತ್ತು ಅರಿವಿನ ತತ್ವಗಳನ್ನು ಪ್ರತಿಯೊಬ್ಬರೂ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಶಿಕ್ಷಕ ಶರಣಪ್ಪ ಸಜ್ಜನ ಅಭಿಪ್ರಾಯಪಟ್ಟರು.

ತಾಲೂಕಿನ ಗೋನವಾಟ್ಲ ಗ್ರಾಮದಲ್ಲಿ ಬಸವ ಜಯಂತಿ ಅಂಗವಾಗಿ ವಿಶ್ವಗುರು ಬಸವಣ್ಣ ಹಾಗೂ ಸಿದ್ದೇಶ್ವರರ ಭಾವಚಿತ್ರಗಳಿಗೆ ಪೂಜೆ ಸಲ್ಲಿಸಿದ ಬಳಿಕ ಮಾತನಾಡಿದ ಅವರು, ಬಸವಣ್ಣನವರು ಸಾರಿದ "ಕಾಯಕವೇ ಕೈಲಾಸ", "ಅರಿವೇ ಗುರು" ಎಂಬ ಮಹತ್ವದ ಸಂದೇಶಗಳು ಇಂದಿನ ಸಮಾಜಕ್ಕೆ ಅತ್ಯಂತ ಪ್ರಸ್ತುತವಾಗಿವೆ ಎಂದರು. ಜಾತಿ-ಭೇದಭಾವ ನಿರ್ಮೂಲನೆ ಹಾಗೂ ಸಮಾನತೆಯ ಆಧಾರದ ಮೇಲೆ ಸಮಾಜ ನಿರ್ಮಾಣ ಮಾಡುವುದೇ ಬಸವಣ್ಣನವರ ಉದ್ದೇಶವಾಗಿತ್ತು ಎಂದು ತಿಳಿಸಿದರು.

ಶರಣರು, ಸಂತರು, ವಚನಕಾರರು ಮತ್ತು ಸಾಹಿತ್ಯಕರ್ತರು ಶತಮಾನಗಳಿಂದ ಸಮಾಜದಲ್ಲಿ ಸತ್ಯ, ನೀತಿ ಮತ್ತು ಮಾನವೀಯ ಮೌಲ್ಯಗಳನ್ನು ಉಳಿಸಿಕೊಂಡು ಬಂದಿದ್ದಾರೆ. ಆದರೆ ಇತ್ತೀಚಿನ ದಿನಗಳಲ್ಲಿ ಸಂಸ್ಕಾರ ಮತ್ತು ಹಿರಿಯರಿಗಿರುವ ಗೌರವ ಕಡಿಮೆಯಾಗುತ್ತಿರುವುದು ಆತಂಕಕಾರಿ ಬೆಳವಣಿಗೆಯಾಗಿದೆ. ಇದರ ಪರಿಣಾಮವಾಗಿ ಸಮಾಜದಲ್ಲಿ ಅನಾಚಾರ, ಹಿಂಸಾಚಾರ ಮತ್ತು ಅಹಿತಕರ ಘಟನೆಗಳು ಹೆಚ್ಚುತ್ತಿರುವುದು ಕಾಣಿಸುತ್ತಿದೆ ಎಂದು ವಿಷಾದಿಸಿದರು.

ಪಾಲಕರು ಮಕ್ಕಳಿಗೆ ಕೇವಲ ಶಿಕ್ಷಣವಷ್ಟೇ ಅಲ್ಲ, ಉತ್ತಮ ಸಂಸ್ಕಾರ, ಶಿಸ್ತು ಮತ್ತು ನೈತಿಕ ಮೌಲ್ಯಗಳನ್ನು ಬೋಧಿಸುವುದು ಅತ್ಯವಶ್ಯಕ. ಮಕ್ಕಳಿಗೆ ಉನ್ನತ ಶಿಕ್ಷಣ ನೀಡುವ ಜೊತೆಗೆ ಮಾನವೀಯ ಗುಣಗಳನ್ನು ಬೆಳೆಸುವ ಹೊಣೆಗಾರಿಕೆ ಪ್ರತಿಯೊಬ್ಬರ ಮೇಲಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಪತ್ರಕರ್ತರ ಸಂಘದ ಪ್ರಧಾನ ಕಾರ್ಯದರ್ಶಿ ಗಂಗಾಧರ ನಾಯಕ, ಗೋಪಾಲ್ ಮಾಸ್ತರ, ಈರಯ್ಯಸ್ವಾಮಿ ಹಿರೇಮಠ, ಅಮರಪ್ಪ ಸಜ್ಜನ್, ಯಮನಪ್ಪ ಗೋಲಪಲಿ, ಬಸರಾಜಗೌಡ ಶಿವರಡ್ಡಿ, ರಂಗಣ್ಣ ನಾಯಕ, ಸೋಮನಾಥ ಹಿರೇಮಠ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

## ಮಸ್ಕಿ: ಕಸಾಪದಿಂದ ಮಕ್ಕಳ ರಂಗ ಸಂಭ್ರಮ, ಹತ್ತು ದಿನ ವಿಶೇಷ ಬೇಸಿಗೆ ಶಿಬಿರ

**ಸಹಾಯವಾಣಿ ಸುದ್ದಿ**



ಮಸ್ಕಿ: ತಾಲೂಕ ಕನ್ನಡ ಸಾಹಿತ್ಯ ಪರಿಷತ್, ಮಕ್ಕಳ ಸಾಹಿತ್ಯ ಪರಿಷತ್ತು ಮಸ್ಕಿ ಹಾಗೂ ನರಸನಗೌಡ ಮೆಮೋರಿಯಲ್ ಶಾಲೆ ಸಭಾಗಿತ್ವದಲ್ಲಿ ಮಕ್ಕಳ ರಂಗ ಸಂಭ್ರಮ 2026 ಹತ್ತು ದಿನಗಳ ಕಾಲ ನಡೆಯುತ್ತಿದೆ. ಪಟ್ಟಣದ ಅನೇಕ ಸಂಪನ್ಮೂಲ ಶಿಕ್ಷಕರು ಪ್ರತಿದಿನ ಬಂದು ಯೋಗ ಧ್ಯಾನ, ಚಿತ್ರಕಲೆ, ಕರಕುಶಲ ಕಲೆ,ಮೋಜಿನ ಗಣಿತ,ವಿಜ್ಞಾನ ವಿಸ್ಮಯ, ದೇಶಿಯ ಆಟಗಳು, ಮಕ್ಕಳಿಗೆ ಕಥೆಗಳು,ಕವನ ರಚನೆ, ಏರೋಬಿಕ್ಸ್ ಹಾಗೂ ಹಾಡು ಮತ್ತು ನೃತ್ಯ, ನಾಟಕ ನಿರ್ದೇಶಕರಾದ ರಂಜಾನ್ ಸಾಬ ಉಳ್ಳಾಗಡ್ಡಿ ನಿತ್ಯ ನಾಟಕ ತರಬೇತಿ, ಹೀಗೆ ವಿವಿಧ ಸೃಜನಾತ್ಮಕ ಚಟುವಟಿಕೆಯ ಕಲಿಕೆಗಳನ್ನು ಕಲಿಸುತ್ತಿದ್ದಾರೆ. ಮಕ್ಕಳು ಉತ್ಸಾಹದಿಂದ ಖುಷಿಯಿಂದ ಎಲ್ಲಾ ಚಟುವಟಿಕೆಗಳ ಭಾಗವಹಿಸುತ್ತಿದ್ದಾರೆ. ಈ ರಂಗಸಂಭ್ರಮ ಕಾರ್ಯಕ್ರಮವು ಜಿಲ್ಲೆಯಲ್ಲಿಯೇ ಅತ್ಯಂತ ಭಿನ್ನವಾಗಿದ್ದು ಮಕ್ಕಳು ಹಾಗೂ ಪಾಲಕರ ಗಮನ ಸೆಳೆದಿದೆ. ಎರಡು ಪರಿಷತ್ತಿನ ಅಧ್ಯಕ್ಷರು ಪದಾಧಿಕಾರಿಗಳು ಹಾಗೂ ಸಂಪನ್ಮೂಲ ಶಿಕ್ಷಕರು ಶಿಬಿರದಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡು ಶಿಬಿರವನ್ನು ಮುನ್ನಡೆಸುತ್ತಿರುವುದು ಮಕ್ಕಳಿಗೆ, ಪಾಲಕ ಪೋಷಕರಿಗೆ ಸಂತೋಷದಾಯಕ ಎಂದು ಅನೇಕರು ಹೇಳಿದರು.

ಈ ಸಂದರ್ಭದಲ್ಲಿ ಕಸಾಪ ಅಧ್ಯಕ್ಷೆ ವಿದ್ಯಾವತಿ ವನಕೆ, ಮಕ್ಕಳ ಸಾಹಿತಿಗಳಾದ ಗುಂಡರಾವ್ ದೇಸಾಯಿ, ಪ್ರಧಾನ ಕಾರ್ಯದರ್ಶಿ ಮಹೇಶ ಶಿಕ್ಷಕರು ಹಾಗೂ ಪದಾಧಿಕಾರಿಗಳು, ಶಿಕ್ಷಕ ಶಿಕ್ಷಕಿಯರು ಇದ್ದರು.

## ವಂದಾಲಿಯಲ್ಲಿ ಸಾಮೂಹಿಕ ವಿವಾಹ ಸಂಭ್ರಮ: ಬಸವ ಜಯಂತಿ ಅಂಗವಾಗಿ 9 ಜೋಡಿಗಳ ಕಲ್ಯಾಣ

**ಸಹಾಯವಾಣಿ ಸುದ್ದಿ**



ಮುದಗಲ್: 34ನೇ ಬಸವ ಜಯಂತಿ ಉತ್ಸವದ ಅಂಗವಾಗಿ ಕೋಡಿಹಾಳ ಶ್ರೀ ಕರಿಬಸವೇಶ್ವರ ಜಾತ್ರಾ ಮಹೋತ್ಸವ ಹಾಗೂ ಶ್ರೀ ಪೂಜ್ಯ ಶ್ರೀ ಗುಡದೂರು ದೊಡ್ಡಬಸವಾರ್ಯ ತಾತನವರ ಮಹಾ ಪುರಾಣ ಪ್ರಯುಕ್ತ ಪಟ್ಟಣ ಸಮೀಪದ ವಂದಾಲಿ ಗ್ರಾಮದಲ್ಲಿ ಸಾಮೂಹಿಕ ವಿವಾಹ ಕಾರ್ಯಕ್ರಮ ಭಕ್ತಿಭಾವದಿಂದ ಹಾಗೂ ವೈಭವವಾಗಿ ಜರುಗಿತು.

ಕಾರ್ಯಕ್ರಮದ ಅಂಗವಾಗಿ ಶ್ರೀ ಕರಿಬಸವೇಶ್ವರರಿಗೆ ಮಹಾ ರುದ್ರಾಭಿಷೇಕವನ್ನು ಶ್ರೀ ವೇ. ಮೂ. ರಾಚಯ್ಯ ಹಿರೇಮಠ, ಶ್ರೀ ವೇ. ಮೂ. ವೀರಯ್ಯಸ್ವಾಮಿ ಹಿರೇಮಠ ಹಾಗೂ ಶ್ರೀ ವೇ. ಮೂ. ಅಮರಯ್ಯ ಹಿರೇಮಠ (ವಂದಾಲಿ) ಅವರು ನೆರವೇರಿಸಿದರು. ನಂತರ ಸುಮಂಗಲಿಯರಿಂದ ಕುಂಭಾಭಿಷೇಕ ನಡೆಯಿತು. ಶ್ರೀ ದೊಡ್ಡ ಬಸವಾರ್ಯರು ಮತ್ತು ಶಿವಶರಣೆ ಶರಣಮ್ಮ ತಾಯಿಯವರ ಪಲ್ಲಕ್ಕಿಗೆ ಮುದ್ದಲಗುಂದಿ ಗ್ರಾಮಸ್ಥರು ಹೂವಿನ ಹಾರ ಅರ್ಪಿಸಿ ಭಕ್ತಿಭಾವ ವ್ಯಕ್ತಪಡಿಸಿದರು.

ಈ ಬಳಿಕ ಗಂಗಾ ಸ್ಥಳದಿಂದ ಗುರಬಸಯ್ಯ ಸ್ವಾಮಿ ಹಾಗೂ ಅಮರೇಶ ಕುಲಕರ್ಣಿ ಅವರ ನೇತೃತ್ವದಲ್ಲಿ ಭವ್ಯ ಮೆರವಣಿಗೆ ನಡೆಯಿತು. ಮೆರವಣಿಗೆಯಲ್ಲಿ ಭಕ್ತರು ಭಜನೆ, ನಾದಸ್ವರದೊಂದಿಗೆ ಪಾಲ್ಗೊಂಡು ಧಾರ್ಮಿಕ ಉತ್ಸವಕ್ಕೆ ಮೆರುಗು ತಂದರು.

ಕಾರ್ಯಕ್ರಮದ ಪ್ರಮುಖ ಆಕರ್ಷಣೆಯಾಗಿ 9 ಜೋಡಿ ವಧು-ವರರ ಸಾಮೂಹಿಕ ವಿವಾಹಗಳು ನೆರವೇರಿದವು. ಸರಳ ಹಾಗೂ ಸಾಂಪ್ರದಾಯಿಕ ವಿಧಾನದಲ್ಲಿ ನಡೆದ ಈ ವಿವಾಹಗಳು ಸಮಾಜದಲ್ಲಿ ಸಮಾನತೆ, ಸೌಹಾರ್ದತೆ ಹಾಗೂ ಅನಾವಶ್ಯಕ ಖರ್ಚು ತಗ್ಗಿಸುವ ಸಂದೇಶವನ್ನು ಸಾರಿದವು. ಬಳಿಕ ಭಕ್ತರಿಗೆ ಮಹಾ ಪ್ರಸಾದ ವ್ಯವಸ್ಥೆ ಮಾಡಲಾಗಿತ್ತು.

ಈ ಸಂದರ್ಭದಲ್ಲಿ ಗುಡದೂರು ಪರಮ ಶ್ರೀ ಗುರಯ್ಯ ತಾತನವರು, ನಂದವಾಡಗಿ ಚೆನ್ನಬಸವ ಶಿವಾಚಾರ್ಯರು, ಅಂಕಲಿ ಮಠದ ಶ್ರೀ ಸಿದ್ದೇಶ್ವರ ಸ್ವಾಮಿಗಳು ಸೇರಿದಂತೆ ವಂದಾಲಿ ಗ್ರಾಮದ ಸಕಲ ಸದ್ಭಕ್ತರು ಹಾಗೂ ಸುತ್ತಮುತ್ತಲಿನ ಗ್ರಾಮಸ್ಥರು ಭಾಗವಹಿಸಿ ಕಾರ್ಯಕ್ರಮಕ್ಕೆ ಯಶಸ್ಸು ತಂದರು.

## ಶ್ರೀ ಬಹುರೂಪಿ ಚೌಡಯ್ಯ ಹಗಲುವೇಷ ಕಲಾವಿದರ ತಂಡದಿಂದ ಬಸವ ಜಯಂತಿ ಆಚರಣೆ




**ಸಹಾಯವಾಣಿ ಸುದ್ದಿ**

ಮಸ್ಕಿ: ಬಸವ ಜಯಂತಿ ನಿಮಿತ್ತ ತಾಲುಕಿನ ಹಸ್ಮಕಲ್ ಗ್ರಾಮದಲ್ಲಿ ಶ್ರೀ ಬಹುರೂಪಿ ಚೌಡಯ್ಯ ಹಗಲುವೇಷ ಕಲಾವಿದರ ಟ್ರಸ್ಟ್ ಹಸ್ಮಕಲ್ ಇವರ ಸಂಯುಕ್ತ ಆಶ್ರಯದಲ್ಲಿ ಬಸವ ಜಯಂತಿ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ ಕಾರ್ಯಕ್ರಜರಗಿತು.

ಈ ವೇಳೆ,ಮಾರಲದಿನ್ನಿ ಶ್ರೀಗಳಾದ ಅಮರೇಶ್ವರ ಶರಣರು ಮಾತನಾಡಿ,ಜಗಜ್ಯೋತಿ ಬಸವೇಶ್ವರರ ತತ್ವ, ಆದರ್ಶಗಳನ್ನು ಸಮಾಜದಲ್ಲಿ ಎಲ್ಲರೂ ಅಳವಡಿಸಿಕೊಂಡಲ್ಲಿ ಮಾತ್ರ ಬಸವ ಜಯಂತಿ ಅರ್ಥಪೂರ್ಣವೆನಿಸುತ್ತದೆ ಎಂದುರು.

ಈ ವೇಳೆ, ಶ್ರೀ ತಮ್ಮಣ್ಣ ಶ್ರೀ ಗಳು ಮಾರಲದಿನ್ನಿ, ಶ್ರೀ ವರ ಸ್ವಾಮಿ ಶರಣರು ಮಾರಲದಿನ್ನಿ ರಂಗಪ್ಪ ಮಾಸ್ತರ್ ತಡಕಲ್ ಕರ್ನಾಟಕ ಜಾನಪದ ಅಕಾಡೆಮಿ ಸದಸ್ಯರು ರಾಯಚೂರು, ಜಂಬಣ್ಣ ಹಸಮಕಲ್, ಅಮರೇಶ ಹಸಮಕಲ್,ನಿರುಪಾದಪ್ಪ ನಂಜಲದಿನ್ನಿ, ಸೇರಿದಂತೆ ಅನೇಕ ಕಲಾವಿದರ ಇದ್ದರು.

## ವಿಶ್ವಮಾನವ ಬಸವಣ್ಣನ ಮೌಲ್ಯಗಳು ಇಂದಿಗೂ ಪ್ರಸ್ತುತ

**ಸಹಾಯವಾಣಿ ಸುದ್ದಿ**



ಕೆಜಿಎಫ್: ವಿಶ್ವಮಾನವ ಬಸವಣ್ಣ 12ನೇ ಶತಮಾನದ ಸಮಾಜ ಸುಧಾರಕರು, ಮಹಾತ್ಮರು, ಜಗತ್ತಿನಲ್ಲಿ ಹೊಸ ವಿಚಾರ ಧಾರೆಯನ್ನು ಹರಿಸಿ ದವರು, ಜಾತಿ ನಿರ್ಮೂಲನೆಗಾಗಿ ಅಸ್ಪೃಶ್ಯತೆಯ ವಿನಾಶಕ್ಕಾಗಿ ಹೋರಾಡಿದ ಕ್ರಾಂತಿಕಾರಿ ಬಸವಣ್ಣ ಇಂದಿನ ಸಮಾಜಕ್ಕೆ ಅವಶ್ಯಕವೆಂದು ಜಿಲ್ಲಾ ಪೊಲೀಸ್ ಉಪ ವರಿಷ್ಠಾಧಿಕಾರಿ ಲಕ್ಷ್ಮಯ್ಯ ಅವರು ಅಭಿಪ್ರಾಯಪಟ್ಟರು.

ಜಿಲ್ಲಾ ಪೊಲೀಸ್ ಕಛೇರಿಯಲ್ಲಿ ಏರ್ಪಡಿಸಿದ್ದ ಬಸವಜಯಂತಿ ಕಾರ್ಯಕ್ರಮದಲ್ಲಿ ಅಧ್ಯಕ್ಷತೆ ವಹಿಸಿ, ಜಿಲ್ಲಾ ಪೊಲೀಸ್ ಉಪ ವರಿಷ್ಠಾಧಿಕಾರಿ ಲಕ್ಷ್ಮಯ್ಯ ಅವರು ಮಾತನಾಡಿ, ಅನುಭವ ಮಂಟಪದ ಮೂಲಕ ಈಗಿನ ಸಂಸತ್ತಿನ ಕಲ್ಪನೆಯನ್ನು 12ನೇ ಶತಮಾನದಲ್ಲೇ ನೀಡಿದ ಮಹಾ ಪುರುಷ, ಜಾತಿ ಬೇಧವಿಲ್ಲದೆ ಪ್ರತಿಯೊಬ್ಬ ಮನುಷ್ಯನನ್ನೂ ಸಮಾನ ಎಂದು ಬಸವಣ್ಣ ಬೋಧಿಸಿದ್ದು, ಎಲ್ಲಾ ರೀತಿಯ ದುಡಿಮೆಯೂ ಅಷ್ಟೇ ಮುಖ್ಯ ಎಂದು ತಿಳಿಸಿಕೊಟ್ಟಿದ್ದರು.

ಹೀಗೆ ಕಾಯಕವೇ ಕೈಲಾಸ ಎಂದು ಸಾರಿದ ವಿಶ್ವ ಗುರು ಬಸವಣ್ಣನವರು ಸಾಮಾಜಿಕ ಪಿಡುಗುಗಳನ್ನು ಹೊಡೆದೊಡಿಸಲು ಪ್ರಯತ್ನಪಟ್ಟರು, ಇವರ ತತ್ವಶಾಸ್ತ್ರ ಮತ್ತು ವಚನಗಳು ಇಂದಿಗೂ ಪ್ರಸ್ತುತವಾಗಿದೆ.

ಇಂತಹ ಸಂದೇಶ ಮತ್ತು ನೀತಿ ಮಾರ್ಗಗಳನ್ನು ನಾವು ನೀವೆಲ್ಲ ಉಳಿಸಿ ಬೆಳೆಸಬೇಕಾಗಿದೆ, ಜೊತೆಜೊತೆಗೆ ಅನುಸರಣೆ ಮಾಡಬೇಕಾಗಿದೆ ಎಂದು ಜಿಲ್ಲಾ ಪೊಲೀಸ್ ಉಪ ವರಿಷ್ಠಾಧಿಕಾರಿ ಲಕ್ಷ್ಮಯ್ಯ ಅವರು ಅಭಿಪ್ರಾಯಪಟ್ಟರು.

ಕಾರ್ಯಕ್ರಮದಲ್ಲಿ ನಿಸ್ತಂತು ಪೊಲೀಸ್ ಇನ್ಸ್‌ಪೆಕ್ಟರ್ ನಾಗಪ್ಪ ಖಾನಾಪೂರ, ಪಿಎಸ್ಐ ಮಹೇಶ್ ಮಾಲಿ, ಆರ್‌ಎಸ್ಐ ಯಮನಪ್ಪ ಪಾತ್ರೂಟ, ಶಾಖಾಧೀಕ್ಷಕ ವಿ.ಮಂಜುನಾಥ ಸೇರಿದಂತೆ ಜಿಲ್ಲೆಯ ಪಿಎಸ್ಐ, , ಎಎಸ್ಐ, ಸಿಬ್ಬಂದಿಗಳು ಹಾಜರಿದ್ದರು. ಜಿಲ್ಲಾ ಪೊಲೀಸ್ ಕಛೇರಿಯ ಅಧಿಕಾರಿ, ಸಿಬ್ಬಂದಿಗಳು ಮತ್ತು ಲಿಪಿಕ ನೌಕರರು ಭಾಗವಹಿಸಿದ್ದರು.

ಕೆಜಿಎಫ್ ಪೊಲೀಸ್ ಜಿಲ್ಲೆಯ ಎಲ್ಲಾ ಪೊಲೀಸ್ ಠಾಣೆ ಹಾಗೂ ಇಲಾಖೆಯ ಎಲ್ಲಾ ಕಛೇರಿಗಳಲ್ಲಿ ಬಸವಜಯಂತಿ ಕಾರ್ಯಕ್ರಮವನ್ನು ಆಚರಿಸಲಾಯಿತು.

## ಜಿಲ್ಲಾಡಳಿತದಿಂದ ಏ.23ರಂದು ಶ್ರೀ ಭಗೀರಥ ಜಯಂತಿ

**ಸಹಾಯವಾಣಿ ಸುದ್ದಿ**

ರಾಯಚೂರು: ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ರಾಯಚೂರು ಮಹಾನಗರ ಪಾಲಿಕೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗಳ ಸಂಯುಕ್ತಾಶ್ರಯದಲ್ಲಿ ಶ್ರೀ ಭಗೀರಥ ಜಯಂತಿ ಕಾರ್ಯಕ್ರಮವು ನಗರದ ಪಂಡಿತ ಸಿದ್ಧರಾಮ ಜಂಬಲದಿನ್ನಿ ರಂಗಮಂದಿರದಲ್ಲಿ ಏಪ್ರಿಲ್ 23ರ ಬೆಳಿಗ್ಗೆ 11ಕ್ಕೆ ಹಮ್ಮಿಕೊಳ್ಳಲಾಗಿದೆ.

ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು ಹಾಗೂ ರಾಯಚೂರು ಜಿಲ್ಲಾ ಉಸ್ತುವಾರಿ ಸಚಿವರಾದ ಡಾ.ಶರಣಪ್ರಕಾಶ್ ರುದ್ರಪ್ಪ ಪಾಟೀಲ್ ಅವರು ಉದ್ಘಾಟನೆ ನೆರವೇರಿಸುವರು.

ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರಾದ ಎನ್.ಎಸ್.ಬೋಸರಾಜು ಅವರು ಘನ ಉಪಸ್ಥಿತಿ ವಹಿಸುವರು.

ಬಾಗಲಕೋಟೆಯ ಉಪನ್ಯಾಸಕರು ಹಾಗೂ ಯೋಗ ಶಿಕ್ಷಕರಾದ ರಾಘವೇಂದ್ರ ನೀಲನ್ನವರ ಅವರು ಶ್ರೀ ಭಗೀರಥ ಜಯಂತಿ ಕುರಿತು ಉಪನ್ಯಾಸ ನೀಡಲಿದ್ದಾರೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಉತ್ತರಾದೇವಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಕರಗ ಮಹೋತ್ಸವ–ತುಂಬಾ ಸಂತೋಷದ ವಿಚಾರ

**ಸಹಾಯವಾಣಿ ಸುದ್ದಿ**



ಚಿಕ್ಕಬಳ್ಳಾಪುರ: ಲೋಕಕಲ್ಯಾಣಕ್ಕಾಗಿ ಕರಗ ಮಹೋತ್ಸವ ಪೆರೆಸಂದ್ರ ಗ್ರಾಮದಲ್ಲಿ ಇಲ್ಲಿನ ಜನತೆ ಸದ್ದಾ ಭಕ್ತಿಗಳಿಂದ ಏರ್ಪಡಿಸಿರುವುದು ತುಂಬಾ ಸಂತೋಷ ತಂದ ವಿಷಯ ಆಗಿದೆ ಎಂದು ಯುವ ಕಾಂಗ್ರೆಸ್ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ರಕ್ಷಾ ರಾಮಯ್ಯ ತಿಳಿಸಿದರು.

ತಾಲೂಕಿನ ಪೆರೆಸಂದ್ರ ಗ್ರಾಮದಲ್ಲಿ ನಿನ್ನೆ ರಾತ್ರಿ ಶ್ರೀ ಸಪ್ಪಲಮ್ಮ ದೇವಾಲಯ ಸಮಿತಿ ವತಿಯಿಂದ ಏರ್ಪಡಿಸಿದ್ದ ಶ್ರೀ ಧರ್ಮರಾಯರ ಕರಗ ಮಹೋತ್ಸವಕ್ಕೆ ಚಾಲನೆ ನೀಡಿ ಮಾತನಾಡಿದರು.

ಕಾಲಕಾಲಕ್ಕೆ ಉತ್ತಮ ಮಳೆ ಹಾಗೂ ಬೆಳೆ ಬಂದು ರೈತರು ಸಮೃದ್ಧಿ ಹೊಂದಬೇಕು ಹಾಗೂ ಸಮೃದ್ಧಿಯಾಗಿ ಮಳೆ ಸುರಿದು ಎಳೆಯನ್ನು ತಂಪು ಮಾಡಬೇಕು ಎಂದು ನಾನು ಕರಗದೇವತೆಯಲ್ಲಿ ಮನಸಾರ ಪ್ರಾರ್ಥಿಸುತ್ತೇನೆ ಈ ಕಾರ್ಯಕ್ರಮಕ್ಕೆ ಬಂದಿರುವುದು ನನಗೆ ತುಂಬಾ ಸಂತೋಷ ತಂದ ವಿಷಯ ಆಗಿದೆ ಎಂದರು.

Printed by: SUCHITHRA PRINTER's & PUBLISHER's,#378/379, MAYAGAPPA COMPLEX" 1st Stage 6th phase Industrial Town West of Chord Road Rajajinagar Bengaluru 560044,karnataka.
Publised by: S.K.Wadeyar,#378/379, "MAYAGAPPA COMPLEX" 1st Stage 6th phase Industrial Town West of Chord Road Rajajinagar Bengaluru-560044,karnataka.
OWned by: S.K.Wadeyar,#378/379, "MAYAGAPPA COMPLEX" 1st Stage 6th phase Industrial Town West of Chord Road Rajajinagar Bengaluru-560044,karnataka.
Printed At :SUCHITHRA PRINTER's & PUBLISHER's,#378/379, MAYAGAPPA COMPLEX" 1st Stage 6th phase Industrial Town West of Chord Road Rajajinagar Bengaluru 560044,karnataka.
Editor :S.K.Wadeyar,#378/379, "MAYAGAPPA COMPLEX" 1st Stage 6th phase Industrial Town West of Chord Road Rajajinagar Bengaluru-560044,karnataka.